Reg. No.: KARKAN/2013/52928 Post No.: KA/SK/MND/978/2020-20222



# ಶ್ರೀ ವೈಕುಂಠ ವಾರ್ತಾ

ಆಧ್ಯಾತ್ಮಿಕ- ಶೈಕ್ಷಣಿಕ-ಮಾಸ ಪತ್ರಿಕೆ


ಸಂಪುಟ : 20 ಸಂಚಿಕೆ : 12 ಮಂಡ್ಯ ಸೆಪ್ಟೆಂಬರ್ 2021 ರೂ. : 2.00 ಪುಟಗಳು : 20






ದಿನಾಂಕ 27-09-2021ನೇ ಸೋಮವಾರ ನಡೆದ ಪರಮ ಪೂಜ್ಯ ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿರವರ ಪುತ್ಥಳಿ ಅನಾವರಣ ಹಾಗೂ ಅನಂತ ಧ್ಯಾನ ಮಂದಿರ ಲೋಕಾರ್ಪಣಾ ಕಾರ್ಯಕ್ರಮದ ಚಿತ್ರಗಳು.








# ಅಭಿನವ ಭಾರತಿ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ನಡೆದ ಶ್ರೀ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮ







## ದಿನಾಂಕ 27–09–2021ನೇ ಸೋಮವಾರ ನಡೆದ ಪರಮ ಪೂಜ್ಯ ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿರವರ ಪುತ್ಥಳಿ ಅನಾವರಣ ಹಾಗೂ ಅನಂತ ಧ್ಯಾನ ಮಂದಿರ ಲೋಕಾರ್ಪಣಾ ಸಮಾರಂಭದ ವೇದಿಕೆ ಕಾರ್ಯಕ್ರಮದ ಚಿತ್ರಗಳು.


















## ಶ್ರೀ ವೈಕುಂಠ ವಾರ್ತಾ

ಆಧ್ಯಾತ್ಮಿಕ– ಶೈಕ್ಷಣಿಕ–ಮಾಸ ಪತ್ರಿಕೆ

ಸಂಪುಟ : 20 | ಸಂಚಿಕೆ : 12
ಮಂಡ್ಯ | ಸೆಪ್ಟೆಂಬರ್ 2021
ಪುಟಗಳು : 20

ಗೌರವ ಸಂಪಾದಕರು :
**ಕೆ. ಎನ್. ರವಿ**

ಪ್ರಕಾಶಕರು ಮತ್ತು ಸಂಪಾದಕರು :
**ಶಿವಮೂರ್ತಿ ಕೀಲಾರ**
ಅಧ್ಯಕ್ಷರು, ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್

ಮುದ್ರಕರು :
ಶಿವಪ್ರಕಾಶ್, ಐಡಿಯಲ್ ಆಫ್‌ಸೆಟ್ ಪ್ರಿಂಟರ್ಸ್
ಮಂಡ್ಯ

ವಾರ್ಷಿಕ ಚಂದಾ ವಿವರ: 150 ರೂಪಾಯಿಗಳು

ವಿಳಾಸ
ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್
5ನೇ ಕ್ರಾಸ್, ಶಂಕರನಗರ, ಮಂಡ್ಯ


### –: ಪ ರಿ ವಿ ಡಿ :–


| ಲೇಖನಗಳು | ಪುಟ ಸಂಖ್ಯೆ |
|---|---|
| ಅನಂತ ಧ್ಯಾನ ಮಂದಿರ ಉದ್ಘಾಟನೆ ಮತ್ತು ಪೂಜ್ಯ ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿರವರ ಪುತ್ಥಳಿ ಅನಾವರಣ | 2 |
| ಗಣಪತಿ ಸ್ತೋತ್ರಂ | 5 |
| ಅಭಿನವ ಭಾರತಿ ಪ್ರೌಢಶಾಲೆಯಲ್ಲಿ ಗಣಪತಿ ಪ್ರತಿಷ್ಠಾಪನೆ | 6 |
| ಆತ್ಮವಿಶ್ವಾಸ | 7 |
| ಸ್ವಾಮೀಜಿಗೊಂದು ಓಲೆ | 9 |
| ಬಾಗಿದವನು ಬಾಳ್ಯಾನು... | 10 |
| ಮಳೆರಾಯನ ಅಂತರಂಗದ ಅಳಲು | 11 |
| ದ್ವಿತೀಯ ಪಿಯುಸಿ ಉತ್ತೀರ್ಣ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಹಾಗು ಬೀಳ್ಕೊಡುಗೆ ಸಮಾರಂಭ | 13 |
| ಅಮರರಾದರು ನಮ್ಮ ಸ್ವಾಮೀಜಿ | 14 |
| ಹಿರಿಯ ಗುರುಗಳ ಹಾದಿಯಲ್ಲಿ ಕಿರಿಯ | 15 |
| ಶ್ರೀ ಶಂಕರ ಸ್ತೋತ್ರಂ | 16 |


# ಸಂಪಾದಕೀಯ

ಶ್ರೀ ಶ್ರೀ ಅನಂತಕುಮಾರ ಸ್ವಾಮೀಜಿರವರು ನಮ್ಮನ್ನು ಅಗಲಿ ಒಂದು ವರ್ಷ ಗತಿಸಿದೆ. ಸ್ವಾಮೀಜಿಗಳ ಮಾರ್ಗದರ್ಶನ ಹಾಕಿಕೊಟ್ಟಂತಹ ದಾರಿಯಲ್ಲಿ ನಾವು ಮುನ್ನಡೆಯುತ್ತಿದ್ದೇವೆ. ಶಿಕ್ಷಣ,ಆಧ್ಯಾತ್ಮ ಮತ್ತು ಯೋಗ ಕ್ಷೇತ್ರಗಳಲ್ಲಿ ಅಪಾರ ಜ್ಞಾನ ಹೊಂದಿದ್ದು ಶ್ರೀ ಅನಂತ ಕುಮಾರ ಸ್ವಾಮೀಜಿರವರ ಸೇವೆ ಅತ್ಯಂತ ಸ್ಮರಣೀಯ.

ಮಂಡ್ಯದ ಶೈಕ್ಷಣಿಕ ಅಭಿವೃದ್ಧಿ, ಮಂಡ್ಯದ ಮಕ್ಕಳ ಅಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸಿದ ಶ್ರೀಗಳನ್ನು ನಾವು ನಿತ್ಯವೂ ಸ್ಮರಣೆ ಮಾಡಲು ಅನಂತ ಧ್ಯಾನ ಮಂದಿರವನ್ನು ಅವರ ಹೆಸರಿನಲ್ಲಿ ಸಮರ್ಪಣೆ ಮಾಡಿದ್ದೇವೆ.

ಸೆಪ್ಟಂಬರ್ 27ರಂದು ಸ್ವಾಮೀಜಿರವರ ಮುರ್ತಿ ಪ್ರತಿಷ್ಠಾಪನೆ ಮಾಡಿ ಧ್ಯಾನ ಮಂದಿರವನ್ನು, ಸುತ್ತೂರು ಕ್ಷೇತ್ರದ ಪೀಠಾಧಿಪತಿಗಳು ಜಗದ್ಗುರು ಶ್ರೀ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿರವರು, ಶ್ರೀ ವಿನಯ್ ಗುರೂಜಿ ರವರು, ಸಂಸ್ಥಾಪಕರು, ಮಹಾತ್ಮಗಾಂಧಿ ಸೇವಾ ಟ್ರಸ್ಟ್ , ಮುಖ್ಯ ಅಥಿತಿಗಳಾಗಿ ಶ್ರೀ ಚಲುವರಾಯಸ್ವಾಮಿರವರು,ಮಾಜಿ ಸಚಿವರು ಮತ್ತು ಸಂಸದರು, ಶ್ರೀ ಗೋ ಮಧುಸೂಧನ್‌ರವರು ಮಾಜಿ ವಿಧಾನ ಪರಿಷತ್ ಸದಸ್ಯರು, ಶ್ರೀ ಮರಿತಿಬ್ಬೇಗೌಡರುಮಾಜಿ ಉಪ ಸಭಾಪತಿಗಳು ಹಾಗೂ ವಿಧಾನ ಪರಿಷತ್ ಸದಸ್ಯರು, ಶ್ರೀ ಮಂಜುರವರು, ಅಧ್ಯಕ್ಷರು, ನಗರ ಸಭೆ, ಮಂಡ್ಯ.ಮತ್ತು ಶ್ರೀ ಶಿವಮೂರ್ತಿ ಕೀಲಾರರವರು, ಅಧ್ಯಕ್ಷರು ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ (ರಿ) ಹಾಗೂ ಪ್ರಧಾನ ಕಾರ್ಯದರ್ಶಿ ಅಭಿನವ ಭಾರತಿ ಶಿಕ್ಷಣ ಟ್ರಸ್ಟ್ (ರಿ) ಮಂಡ್ಯ. ಇವರ ಸಮ್ಮುಖದಲ್ಲಿ ಅನಂತ ಧ್ಯಾನ ಮಂದಿರ ಲೋಕಾರ್ಪಣೆ ಯಾಯಿತು.

ಅನಂತ ಧ್ಯಾನ ಮಂದಿರ ನಿರ್ಮಾಣದ ಪರಿಕಲ್ಪನೆ ಸ್ವಾಮೀಜಿ ಅವರ ಆಶಯಕ್ಕೆ ಅನುಗುಣವಾಗಿದೆ. ಶ್ರೀಗಳು ನಮ್ಮೊಂದಿಗೆ ಇದ್ದಾಗ ಧ್ಯಾನ, ಭಜನೆ, ಸತ್ಸಂಗ ಕಾರ್ಯಕ್ರಮಗಳು ನಮ್ಮ ಸಂಸ್ಥೆಯ ಶಾಲೆಗಳ ಸಭಾಂಗಣದಲ್ಲಿ ನಡೆಯುತ್ತಿದ್ದವು.ಆದರೆ ಶ್ರೀಗಳ ಹೆಸರಿನಲ್ಲಿ ನಿರ್ಮಾಣ ಮಾಡಲಾಗಿರುವ ಅನಂತ ಭವನದಲ್ಲಿ ನಡೆಸಲು ಅನುಕೂಲ ಮಾಡಿಕೊಟ್ಟಿರುವುದು ಭಕ್ತ ಸಮೂಹಕ್ಕೆ ಸಂತಸ, ಸಮಾಧಾನ ತಂದಿದೆ.ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಸದುಪಯೋಗ ಪಡಿಸಿಕೊಳ್ಳಲು ಸಹಕಾರಿಯಾಗಿದೆ.

ಅನಂತ ಕುಮಾರ ಸ್ವಾಮೀಜಿರವರ ಸ್ಮರಣಾರ್ಥವಾಗಿ ಅವರು ಹಾಕಿಕೊಟ್ಟ ದಾರಿಯಂತೆ ಧ್ಯಾನ, ಯೋಗ, ಭಜನೆ, ತತ್ಸಂಗದಂತಹ ಕಾರ್ಯಕ್ರಮಗಳನ್ನು ಸಾರ್ವಜನಿಕವಾಗಿ ನಡೆಸಲು ಧ್ಯಾನಮಂದಿರದಲ್ಲಿ ಅವಕಾಶ ಮಾಡಿಕೊಡ ಲಾಗಿದೆ. ಸ್ವಾಮೀಜಿಯ ಕೊನೆ ದಿನದಲ್ಲಿ ಭಕ್ತಿ ಪಂಥದ ಮಾರ್ಗವನ್ನು ಅನುಸರಿಸಿದರು. ಸ್ವಾರ್ಥ ರಹಿತ ಬದುಕು, ಬಡವರ ಬಗ್ಗೆ ಕನಿಕರ, ಸರಳ ಜೀವನ, ಅವರ ಬದುಕಿನ ಮಾರ್ಗಗಳಾಗಿದ್ದವು. ಅಭಿನವ ಭಾರತಿಗೆ ಭಾವ ಮತ್ತು ಜೀವ ತುಂಬಿದ ಶ್ರೀಗಳು ಸನ್ಮಾರ್ಗದಲ್ಲಿ ನಡೆದು ತೋರಿಸಿದರು.

ಅನಂತ ಧ್ಯಾನ ಮಂದಿರದ ಕೊಡುಗೆ, ಅಂತರಾಳದ ಉದ್ದೇಶ ಉದಾತ್ತವಾಗಿದೆ.

–ಶ್ರೀ ಶಿವಮೂರ್ತಿ ಕೀಲಾರ
ಅಧ್ಯಕ್ಷರು ವೆಂಕಟೇಶ್ವರಚಾರಿಟಬಲ್ ಟ್ರಸ್ಟ್ (ರಿ)
ಪ್ರಧಾನ ಕಾರ್ಯದರ್ಶಿ ಅಭಿನವ ಭಾರತಿ ಶಿಕ್ಷಣ ಟ್ರಸ್ಟ್ (ರಿ), ಮಂಡ್ಯ

# ಅನಂತ ಧ್ಯಾನ ಮಂದಿರ ಉದ್ಘಾಟನೆ ಮತ್ತು ಪೂಜ್ಯ ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿರವರ ಪುತ್ಥಳಿ ಅನಾವರಣ

ದಿನಾಂಕ 27–09–2021ನೇ ಸೋಮವಾರದಂದು ನಿಷ್ಕಾಮ ಯೋಗಿ, ಆಧ್ಯಾತ್ಮ ಬಂಧು, ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿರವರ ಮೊದಲನೆ ವರ್ಷದ ಪುಣ್ಯ ಸ್ಮರಣೆಯನ್ನು ಮಂಡ್ಯದ ಶಂಕರ ನಗರದಲ್ಲಿರುವ ಅಭಿನವ ಭಾರತಿ ಕಾಲೇಜು ಆವರಣದಲ್ಲಿ ಅನಂತ ಧ್ಯಾನ ಮಂದಿರ ಮತ್ತು ಆ ಧ್ಯಾನ ಮಂದಿರದ ಒಳಭಾಗದಲ್ಲಿ ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿರವರ ಪುತ್ಥಳಿಯನ್ನು ಅನಾವರಣಗೊಳಿಸಲಾಯಿತು.

ಈ ಸುಂದರ ಸಮಾರಂಭದ ಅತಿಥಿಗಳನ್ನು ಅಂಬುಜಮ್ಮನವರ ಪಾರ್ಕ್‌ನಿಂದ ಸಕಲ ಗೌರವಾದರಗಳಿಮದ ಕರೆತರಲಾಯಿತು. ಅಭಿನವ ಭಾರತಿ ಸಮೂಹ ಸಂಸ್ಥೆಗಳ ಬಾಲಕಿಯರ ಪೂರ್ಣಕುಂಭ ಸ್ವಾಗತದೊಂದಿಗೆ ಮಂಗಳ ವಾದ್ಯ ಮತ್ತು ವೆದಘೋಷಗಳ ಜೊತೆ ಅತಿಥಿಗಳನ್ನು ಬರಮಾಡಿಕೊಳ್ಳಲಾಯಿತು. ಅವಧೂತ ಶ್ರೀ ವಿನಯ್ ಗುರೂಜಿರವರು ಅನಂತ ಧ್ಯಾನ ಮಂದಿರವನ್ನು ಉದ್ಘಾಟಿಸಿದರು. ಜಗದ್ಗುರು ಶ್ರೀ ಶ್ರೀ ದೇಶಿಕೇಂದ್ರ ಮಹಾಸ್ವಾಮೀಜಿಯವರು ಶ್ರೀ ಅನಂತ ಕುಮಾರ ಸ್ವಾಮೀಜಿರವರ ಪ್ರತಿಮೆಯನ್ನು ಅನಾವರಣಗೊಳಿಸಿದರು.

ನಂತರ ವೇದಬ್ರಹ್ಮ ವಿದ್ವಾನ್ ಕುಮಾರ ಸ್ವಾಮಿ ಮತ್ತು ತಂಡದವರಿಂದ ವೇದಘೋಷ ಹಾಗೂ ಭೂಮಿಕ ಮತ್ತು ತಂಡದವರು ಪ್ರಾರ್ಥನೆ ಮಾಡಿದರು. ಅಭಿನವ ಭಾರತಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಹೆಚ್.ಟಿ. ನಾಗೇಂದ್ರರಾವ್‌ರವರು ಸ್ವಾಗತಿಸಿದರು. ಶ್ರೀ ಸ್ವಾಮೀಜಿಯವರ ಮೊದಲನೇ ವರ್ಷದ ಶ್ರಾದ್ಧಾ ವಿಧಿ ವಿಧಾನಗಳನ್ನು ಶ್ರೀ ಶಿವಮೂರ್ತಿ ಕೀಲಾರರವರು ಶ್ರದ್ಧಾ ಭಕ್ತಿಯಿಂದ ನೆರವೇರಿಸಿದ ಮಾಹಿತಿಯನ್ನು ನೀಡಿದರು.

ಶ್ರೀ ಅನಂತ ಕುಮಾರ ಸ್ವಾಮೀಜಿಯವರೊಂದಿಗೆ



ಕಳೆದ ನೆನಪುಗಳನ್ನು ಮೆಲಕು ಹಾಕಿದ ಶಿವಮೂರ್ತಿ ಕೀಲಾರರವರು, ಭಾರತದಲ್ಲಿ ಧಾರ್ಮಿಕ ಮೌಲ್ಯ ಕುಸಿಯುತ್ತಿರುವುದಕ್ಕೆ ಹಾಗೂ ಭಾರತದಲ್ಲಿ ವ್ಯಕ್ತಿಗತ ಚಾರಿತ್ರ್ಯ ಪತನ ವಾಗುತ್ತಿರುವುದಕ್ಕೆ ಸ್ವಾಮೀಜಿರವರು ಬೇಸರ ವ್ಯಕ್ತಪಡಿಸುತ್ತಿದ್ದರು ಎಂದರು. ಭಾರತದಲ್ಲಿ ಮತಾಂತರ ಉಗ್ಗಿಲ್ಲದೆ ನಡೆಯುತ್ತಿರುವುದಕ್ಕೆ ಅತಿಯಾಗಿ ನೊಂದಿದ್ದರು. ಸ್ವಾಮೀಜಿಗಳು ಯಾವಾಗಲೂ ಹೇಳುತ್ತಿದ್ದ ಒಂದು ಮಾತು " ಭಾರತದಲ್ಲಿ ಹಿಂದುತ್ವ ನಶಿಸಿಹೋದರೆ ಪ್ರಪಂಚದಲ್ಲಿ ಮಾನವೀಯತೆಯೇ ಉಳಿಯುವುದಿಲ್ಲ. ಪ್ರಪಂಚ ಭ್ರಷ್ಟವಾಗುತ್ತದೆ". ಇನ್ನೊಬ್ಬರ ಹೃದಯದಲ್ಲಿ ಪರಮಾತ್ಮನಿದ್ದಾನೆ ಎಂದು ನಂಬುವ ಹಿಂದೂ ಧರ್ಮ ಪ್ರಪಂಚದಲ್ಲಿ ಶಾಶ್ವತವಾಗಿ ಉಳಿಯಬೇಕೆಂಬುದು ಶ್ರೀ ಸ್ವಾಮಿಜಿರವರ ಮನದಾಳದ ಅಭಿಲಾಷೆಯಾಗಿತ್ತು ಎಂದು ಹೇಳಿದರು.

ಬೆಂಗಳೂರಿನ ಮಹಾತ್ಮ ಗಾಂಧಿ ಸೇವಾ ಟ್ರಸ್ಟ್ (ರಿ) ಸಂಸ್ಥಾಪಕರಾದ ಅವಧೂತ ಶ್ರೀ ವಿನಯ್ ಗುರೂಜಿರವರು ವೇದಿಕೆ ಕಾರ್ಯಕ್ರಮಗಳನ್ನು ಉದ್ಘಾಟಿಸಿದರು.

ಶ್ರೀ ಸ್ವಾಮೀಜಿರವರ ಒಡನಾಡಿ ಮಾಜಿ ಸಚಿವರೂ ಶ್ರೀ ಚಲುವರಾಯಸ್ವಾಮಿರವರು ಮಾತನಾಡಿ, ಸ್ವಾಮಿಜಿರವರು ಎಸ್. ಡಿ. ಜಯರಾಮ್ರವರ ಸಹಕಾರದೊಂದಿಗೆ ಅಭಿನವ ಭಾರತಿ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ರೀತಿಯನ್ನು ಮುಕ್ತ ಕಂಠದಿಂದ ಪ್ರಶಂಸಿದರು. ತಾವೂ ಕೂಡ ಕೆಲವು ಸಂದರ್ಭಗಳಲ್ಲಿ ಶ್ರೀ ಸ್ವಾಮೀಜಿರವರ ಈ ಕೈಂಕರ್ಯದಲ್ಲಿ ಸಹಕಾರ ನೀಡಿರುವುದಕ್ಕೆ ಧನ್ಯತಾ ಭಾವವನ್ನು ವ್ಯಕ್ತಪಡಿಸಿದರು. ಆದಿ ಚುಂಚನಗಿರಿ ಮಠದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಜಿರವರ ನಿರಂತರ ಒಡನಾಟ ಸಂಸ್ಥೆಯ ಏಳ್ಗೆಯೊಂದಿಗೆ ಬೆಸೆದುಕೊಂಡಿದೆ. ಪುರಸಭೆ ಅಧ್ಯಕ್ಷರಾದ ಶ್ರೀಮತಿ ಅಂಬುಜಮ್ಮ ಮತ್ತು ಪತ್ರಕರ್ತ ವೆಂಕಟೇಶ್ರವರ ಸಹಕಾರವನ್ನು ಸ್ಮರಿಸಿದರು.

ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದ ಮಾಜಿ ವಿದಾನ ಪರಿಷತ್ತ್ ಸದಸ್ಯರಾದ ಗೋ. ಮಧುಸೂದನ್‌ರವರು ಮಾತನಾಡಿ

ಸ್ವಾಮೀಜಿಯವರು 1937ರಲ್ಲಿ ಜನಿಸಿ ತಾವು ಹುಟ್ಟಿದ ಸ್ಥಳ ವಾರಣಾಸಿಯನ್ನು 1963ರಲ್ಲಿ ಬಿಟ್ಟು ಸರ್ವಸ್ವವನ್ನು ಭಗವಂತನಿಗೆ ಅರ್ಪಿಸಿ ಸ್ವಾಮೀಜಿಯವರು ಆದರ್ಶಪ್ರಾಯರಾಗಿದ್ದಾರೆ. ಅನಂತ ಕುಮಾರ ಸ್ವಾಮೀಜಿರವರ ಆತ್ಮ ಇಂದು ಅನಮತದಲ್ಲಿ ಲೀನವಾಗಿದ್ದರೂ ಆ ಆತ್ಮವು ಎಂದಿಗೂ ನಮ್ಮ ಹೃದಯಕ್ಕೆ ಬೇಕಾಗುವ ಆಧ್ಯಾತ್ಮಿಕ ಶಕ್ತಿಯನ್ನು ಸದಾ ಕೊಡುತ್ತಿರುತ್ತದೆ ಎಂದು ಮಾರ್ಮಿಕವಾಗಿ ನುಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನಗರ ಸಭೆಯ ಅಧ್ಯಕ್ಷ ಹೆ.ಎಸ್ ಮಂಜುರವರು ಶ್ರೀ ಸ್ವಾಮಿಜಿರವರ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡುತ್ತಾ ಮಂಡ್ಯದಲ್ಲಿ ಸದ್ದಿಲ್ಲದೇ ಶೈಕ್ಷಣಿಕ ಕ್ರಾಂತಿ ಮಾಡಿದ ನಿಷ್ಕಾಮಯೋಗಿ, ಅವರನ್ನು ಮಂಡ್ಯದ ಜನತೆ ಸರ್ವಕಾಲಕ್ಕೂ ನೆನೆಯಬೇಕು. ಅನಂತ ಧ್ಯಾನ ಮಂದಿರ ಉದ್ಘಾಟನೆಗೆ ಸಾಕ್ಷಿಯಾಗುತ್ತಿರುವುದಕ್ಕೆ ನನಗೆ ಧನ್ಯತಾ ಭಾವವಿದೆಯೆಂದು ತಿಳಿಸಿದರು.

ವಿನಯ್ ಗುರೂಜಿರವರು ಉದ್ಘಾಟನಾ ಭಾಷಣ ಮಾಡಿ, ಮಂಡ್ಯದವರು ಇಡೀ ಜಗತ್ತಿಗೆ ಬೆಲ್ಲವನ್ನು, ಬೆಣ್ಣೆಯನ್ನು ಧಾರೆ ಎರೆದವರು. ಬೆಲ್ಲವೆಂದರೆ ವೈದ್ಯ ವಿಜ್ಞಾನದಲ್ಲ ಹೆಚ್ಚು ಮಾಡುವ ವಸ್ತು. ಮತ್ತು ಎಲ್ಲರಿಗೂ ಸಿಹಿಯನ್ನು ಹಂಚುವ ವಸ್ತು. ಬೆಣ್ಣೆ



ಎಂದರೆ ನಂಜಿಲ್ಲದ ವಸ್ತು. ಆದ್ದರಿಂದ ಮಂಡ್ಯದವರ ಮನಸ್ಸಿನಲ್ಲಿ ನಂಜು ಕಹಿ ಎರಡೂ ಇಲ್ಲ. ಮಂಡ್ಯದಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುವುದರಿಂದ ಮಂಡ್ಯದ ಜನರನ್ನು ಕಬ್ಬಿಗೆ ಹೋಲಿಸಬಹುದು. ಕಬ್ಬು ಸ್ವಲ್ಪ ಗಟ್ಟಿಯಾದ ಪದಾರ್ಥ ಆದರೆ ಅದರ ಒಳಗಡೆ ಶುದ್ಧವಾದ ರಸವಿದೆ. ಅದೇ ರೀತಿ ಮಂಡ್ಯದ ಜನ ಹೊರನೋಟದಲ್ಲಿ ಒರಟಾಗಿ ಕಾಣಿಸಿದರೂ ಒಳನೋಟದಲ್ಲಿ ಬೆಣ್ಣೆ ಎಂದು ಮಂಡ್ಯದ ಜನರ ಬಗೆಗಿನ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರು ಹಾಗೂ ಅಭಿನವ ಭಾರತಿ ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಮೂರ್ತಿ ಕೀಲಾರರವರು ವೇದಿಕೆಯ ಗಣ್ಯರನ್ನು ಗೌರವ ಪೂರ್ವಕವಾಗಿ ಅಭಿನಂದಿಸಿದರು. ಸುತ್ತೂರು ಶ್ರೀಗಳೊಂದಿಗಿನ ತಮ್ಮ ಸುಮಧುರ ಬಾಂಧವ್ಯವನ್ನು ಮೆಲುಕು ಹಾಕುತ್ತಾ ಮಂಡ್ಯದ ಫಾರ್ಮಸಿ ಕಾಲೇಜ್ ತರುವುದಕ್ಕೆ ಕಾರಣ

ಕರ್ತರಾದ ಶ್ರೀ ಗಳನ್ನು ಮನಸಾರೆ ಅಭಿನಂದಿಸಿದರು.

ಮಂಡ್ಯದ ಜನತೆಯ ಮೇಲಿನ ಪ್ರೀತಿಯಿಂದ ಆಗಮಿಸಿ ಇನ್ನು ಮುಂದೆಯೂ ಮಂಡ್ಯ ಜನರ ಸೇವೆ ಮಾಡುವುದಾಗಿ ತಿಳಿಸಿದ ಶ್ರೀ ಗುರೂಜಿರವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿದರು.

ಸಂಸ್ಥೆಯನ್ನು ಯಶಸ್ವಿಯಾಗಿ ಬೆಳೆಸಲು ಸರ್ಕಾರದ ಕಡೆಯಿಂದ ನಡೆಯಬೇಕಾದ ಕೆಲಸಗಳನ್ನು ಸಮಯಕ್ಕೆ ಸರಿಯಾಗಿ ನಡೆಸಿಕೊಟ್ಟ ಶ್ರೀ ಚಲುವರಾಯ ಸ್ವಾಮಿಯವರನ್ನು ಕೃತಜ್ಞತಾ ಪೂರ್ವಕವಾಗಿ ವಂದಿಸಿದರು.

ನಗರ ಸಭೆಯ ಅಧ್ಯಕ್ಷರಾದ ಶ್ರೀ ಮಂಜುರವರಲ್ಲಿ ಮಂಡ್ಯದ ಯಾವುದಾದರೊಂದು ವೃತ್ತಕ್ಕೆ ಅನಂತ ಕುಮಾರ ಸ್ವಾಮೀಜಿ ವೃತ್ತವೆಂದು ಹೆಸರಿಡಬೇಕೆಂದು ಅಗ್ರಹ ಪೂರ್ವಕವಾಗಿ ವಿನಂತಿ ಮಾಡಿಕೊಂಡರು.

ಇದರಿಂದ 4‑5 ತಲೆಮಾರಿನವರೆಗಾದರೂ ಶ್ರೀ ಸ್ವಾಮೀಜಿ ಅವರನ್ನು ಮಂಡ್ಯದ ಜನತೆ ನೆನೆಸಿಕೊಳ್ಳಲು ಸಹಕಾರಿಯಾಗುತ್ತದೆ ಎಂಬ ತಮ್ಮ ಮನದಿಚ್ಛೆಯನ್ನು ವ್ಯಕ್ತಪಡಿಸಿದರು.ಹಾಗೂ ವೇದಿಕೆಯಲ್ಲಿದ್ದ ಇತರೆ ಎಲ್ಲಾ ಗಣ್ಯರಿಗೂ ಧನ್ಯತಾ ಪೂರ್ವಕವಾಗಿ ಅಭಿನಂದನೆ ಸಲ್ಲಿಸಿದರು. ತಮ್ಮ ಎಲ್ಲಾ ಅಭಿವೃದ್ಧಿ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಆಡಳಿತ ಮಂಡಳಿಯ ಸದಸ್ಯರಿಗೂ ಧನ್ಯತಾ ಪೂರ್ವಕವಾಗಿ ಕೃತಜ್ಞತೆಯನ್ನು ತಿಳಿಸಿದರು. ಮಂಡ್ಯದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಹಕರಿಸಲೆಂದು ಬಂದ ಅಮೇರಿಕಾದ ನ್ಯೂಯಾರ್ಕ್ ಯುನಿವರ್ಸಿಟಿಯ ತಂಡದವರಿಗೂ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು. ಧ್ಯಾನ ಕೇಂದ್ರದ ನಿರ್ಮಾಣದಲ್ಲಿ ಸಹಕರಿಸಿದ ಸರ್ವರಿಗೂ ಕೃತಜ್ಞತಾ ಪೂರ್ವಕ ಅಭಿನಂದನೆಯನ್ನು ಸಲ್ಲಿಸಿದರು.

ದಿವ್ಯ ಸಾನಿಧ್ಯ ವಹಿಸಿದ್ದ ಸುತ್ತೂರು ಶ್ರೀ ಕ್ಷೇತ್ರ, ಸುತ್ತೂರು ಮಠದ ಪೀಠಾಧಿಪತಿಗಳಾದ ಮೈಸೂರು ಜಿಲ್ಲೆಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಮಹಾಸ್ವಾಮೀಜಿರವರು ತಮ್ಮ ಆಶೀರ್ವಚನದಲ್ಲಿ ಶ್ರೀ ಅನಂತ ಕುಮಾರ ಸ್ವಾಮೀಜಿರವರ ನಿಸ್ವಾರ್ಥ ಸೇವೆಯ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಮೈಸೂರಿಗೆ ವರ್ಗಾವಣೆ ಆಗಿ ಬಂದ ಅಧಿಕಾರಿಗಳು ನಿವೃತ್ತಿಯಾದ ಬಳಿಕ ಬೇರೆಲ್ಲೂ ಹೋಗದೇ ಮೈಸೂರಿನಲ್ಲೇ ಉಳಿಯುವಂತೆ ಮಂಡ್ಯಕ್ಕೆ ಯಾರಾದರೂ ಸಂತರು ಬಂದರೆ ಅವರು ಮಂಡ್ಯ ಬಿಟ್ಟು ಹೋಗದಿರುವುದಕ್ಕೆ ಅನಂತ ಕುಮಾರ ಸ್ವಾಮೀಜಿಯವರೇ ಸಾಕ್ಷಿ. ಶ್ರಿ ಸ್ವಾಮೀಜಿಯವರು ಎಲ್ಲರಂತೆ ಮಂಡ್ಯಕ್ಕೆ ಬಂದು ನೆಲೆಸಿದವರಲ್ಲ. ಅವರು ಸಮಾಜಕ್ಕೆ ಅನುಕೂಲ ಆಗುವಂತಹ, ಸಮಾಜಕ್ಕೆ ಯಾವತ್ತೂ ನೆನೆಯುವಂತ ಮಹತ್ಕಾರ್ಯವನ್ನು ಮಾಡಿ ಮಂಡ್ಯಕ್ಕೆ ಅತ್ಯುತ್ತಮ ಕೊಡುಗೆಯನ್ನು ಕೊಟ್ಟು ಹೋಗಿದ್ದಾರೆ. ಶ್ರೀ ಸ್ವಾಮೀಜಿರವರು ಬಹಳ ವಿನಯಶೀಲರಾಗಿದ್ದರು. ಮೊದಲಿಗೆ ವೆಂಕಟೇಶ್ವರ ಧ್ಯಾನ ಕೇಂದ್ರವನ್ನು ಸ್ಥಾಪಿಸಿ ಅನಂತರ ಅಭಿನವ ಭಾರತಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಬೆಳೆಸಿದರು. ಅವರು ಭೌತಿಕ ಹಾಗೂ ಮಾನಸಿಕ ಯೋಗವನ್ನು ಮಾಡುತ್ತಿದ್ದರು. ಅವರ ಧ್ಯಾನ ಕೇಂದ್ರದಲ್ಲಿ ಧ್ಯಾನ ದೀಕ್ಷೆಯನ್ನು ಪಡೆದ ಅನೇಕ ಜನ ಜೀವನದಲ್ಲಿ ಸಂತೋಷದ ಬದುಕನ್ನು ನಡೆಸುತ್ತಿದ್ದಾರೆ. ಮತ್ತು ವಿದೇಶಗಳಲ್ಲೂ ನೆಲೆಸಿ ಮಹತ್ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸರಳವಾದ ಉಡುಗೆ ತೊಡುಗೆಗಳಿಂದ ಯಾವಾಗಲೂ ಭಗವಂತನ ನಾಮಸ್ಮರಣೆ ಮಾಡುತ್ತಾ ಮಂಡ್ಯದ ಜನರ ಪ್ರೀತಿ ಪಾತ್ರರಾಗಿದ್ದರು. ತಮ್ಮ ಹಲವಾರು ಶಿಕ್ಷಣ ಸಂಸ್ಥೆಗಳ ಮೂಲಕ ಮಕ್ಕಳನ್ನು ವಿದ್ಯಾವಂತರನ್ನಾಗಿ ಮತ್ತು ಗುಣವಂತರನ್ನಾಗಿ ಮಾಡಿದರೆ ಆ ಮಕ್ಕಳು ಮುಂದೆ ದೇಶ ಕಟ್ಟುವ ಸೇವೆಯಲ್ಲಿ ತೊಡಗುತ್ತಾರೆ ಎಂಬ ಮಾತಿನಲ್ಲಿ ನಂಬಿಕೆ ಇಟ್ಟಿದ್ದರು.ಧ್ಯಾನ ಕೇಂದ್ರ ಮಹತ್ವವನ್ನು ತಿಳಿಸುತ್ತಾ ಧ್ಯಾನ ಮಾಡುವುದರಿಂದ ಹೊರ ಜಗತ್ತನ್ನು ಮರರೆಯುವಂತ ಅವ್ಯಕ್ತವಾದ, ಅನಂತವಾದ ಸಂತೋಷ, ತೃಪ್ತಿಯನ್ನು ಅನುಭವಿಸಬಹುದು. ಮನುಷ್ಯನ ಜೀವನದಲ್ಲಿ ಎಷ್ಟೇ ಜಂಜಾಟಗಳಿರಬಹುದು, ಎಷ್ಟೇ ಕೆಲಸದ ಒತ್ತಡಗಳಿರಬಹುದು ದಿನಕ್ಕೆ ಸ್ವಲ್ಪ ಹೊತ್ತಾದರೂ ಧ್ಯಾನ ಮಾಡುವುದರಿಂದ ಆತ್ಮ ನಿರೀಕ್ಷೆಯನ್ನು ಪಡೆದು ಶಾಂತಿ, ನೆಮ್ಮದಿಯನ್ನು ಪಡೆಯಬಹುದಾಗಿದೆ. ಆ ಕಾರಣಕ್ಕಾಗಿ ನಿರ್ಮಿಸಿದ ಧ್ಯಾನ ಕೇಂದ್ರವನ್ನು ಸಮಪ್ರಕವಾಗಿ ಬಳಸುವಂತೆ ಮಂಡ್ಯ ಜನತೆಗೆ ಹಿತವಚನವನ್ನು ನೀಡಿದರು.

ಇತ್ತೀಚಿನ ದಿನಗಳಲ್ಲಿ ಶ್ರೀ ಸ್ವಾಮೀಜಿರವರಿಗೆ ಕಾಡುತ್ತಿದ್ದ ಸಮಸ್ಯೆ ಏನೆಂದರೆ ತಾನು ಕಟ್ಟಿ ಬೆಳೆಸಿದ ಸಂಸ್ಥೆಯನ್ನು ಯಾರು ಮುನ್ನಡೆಸುತ್ತಾರೆಂಬುದುದಾಗಿತ್ತು. ಅದಕ್ಕೆ ಪೂರಕವಾಗಿ ಶ್ರೀ ಶಿವಮೂರ್ತಿ ಕೀಲಾರರವರು ಅಮೇರಿಕಾದಿಂದ ಹಿಂತಿರುಗಿ ಶ್ರೀ ಸ್ವಾಮೀಜಿಯವರ ಎಲ್ಲಾ ಶಿಕ್ಷಣ ಸಂಸ್ಥೆಗಳ ಜವಬ್ದಾರಿಯನ್ನು ವಹಿಸಿಕೊಂಡು ಮುನ್ನಡೆಸಿದರು. ಎಲ್ಲಾ ಸಮೂಹ ಸಂಸ್ಥೆಗಳಿಗೆ ಆಧುನಿಕ ಸ್ಪರ್ಶವನ್ನು ಕೊಟ್ಟು ಗುಣಾತ್ಮಕವಾಗಿ ನಡೆಸಿಕೊಂಡು ಹೂಗುತ್ತಿರುವುದಕ್ಕೆ ಶ್ರೀ ಶಿವಮೂರ್ತಿ ಕೀಲಾರರವರನ್ನು ಅಭಿನಂದಿಸಿದರು.

– ಮುಂದಿನ ಸಂಚಿಕೆಗೆ ಮುಂದುವರಿಯುವುದು

# ಗಣಪತಿ ಸ್ತೋತ್ರಂ

**ವಕ್ರತುಂಡ ಮಹಾಕಾಯ ಕೋಟಿಸೂರ್ಯಸಮಪ್ರಭ।**
**ನಿರ್ವಿಘ್ನಂ ಕರು ಮೇ ದೇವ ಸರ್ವಕಾರ್ಯೇಷು ಸರ್ವದಾ ॥**



**ಪದಚ್ಛೇದ :** ವಕ್ರತುಂಡ, ಮಹಾಕಾಯ, ಕೋಟಿಸೂರ್ಯಸಮಪ್ರಭ,
ನಿರ್ವಿಘ್ನಂ, ಕುರು, ಮೇ, ದೇವ, ಸರ್ವಕಾರ್ಯೇಷು, ಸರ್ವದಾ ।

**ಅನ್ವಯ :** ಹೇ ವಕ್ರತುಂಡ, ಹೇ ಮಹಾಕಾಯ, ಕೋಟಿಸೂರ್ಯಸಮಪ್ರಭ, ಹೇ ದೇವ, ಮೇ, ಸರ್ವಕಾರ್ಯೇಷು, ಸರ್ವದಾ, ನಿರ್ವಿಘ್ನಂ, ಕುರು ।

ವಕ್ರವಾದ ಮುಖವುಳ್ಳವನಾದ, ದೊಡ್ಡ ಶರೀರವನ್ನುಳ್ಳ, ಕೋಟಿಸೂರ್ಯರಿಗೆ ಸಮನಾದ ಕಾಂತಿಯನ್ನುಳ್ಳ ಗಣಪತಿ ದೇವನೇ, ನನ್ನ ಸಕಲಕಾರ್ಯಗಳಿಗೂ ಸರ್ವದಾ ನಿರ್ವಿಘ್ನವಾಗಿ ನಡೆಯುವಂತೆ ಮಾಡು.

**ತಾತ್ಪರ್ಯಾರ್ಥ :** ಇದೊಂದು ಗಣಪತಿಯ ಪ್ರಸಿದ್ಧವಾದ ಸ್ತೋತ್ರ. ಇದನ್ನು ಪಾರಾಯಣ ಮಾಡಿ, ಯಾವುದೇ ಕೆಲಸವನ್ನು ಪ್ರಾರಂಭಿಸಿದರೂ, ಆ ಕೆಲಸವು ನಿರ್ವಿಘ್ನವಾಗಿ ನಡೆಯುತ್ತದೆ, ಹಾಗೂ ಮುಂದುವರೆಯುತ್ತದೆ. ಈ ಶ್ಲೋಕದ ಸ್ವಾರಸ್ಯವನ್ನು ನೋಡೋಣ:

**ವಕ್ರತುಂಡ :** ಆನೆಯ ಮುಖವು ಸೊಂಡಿಲಿನಿಂದ ವಕ್ರವಾಗಿರುತ್ತದೆ.ಯಲ್ಲವೇ? ಹೀಗಗಿ ಆನೆಯ ಮುಖವನ್ನುಳ್ಳ ಗಣಪತಿಯ ಮುಖವೂ ಡೊಂಕಾಗಿರುತ್ತದೆ.

**ಮಹಾಕಾಯ :** ಗಣಪತಿಯ ಶರಿರವು ಅಂದರೆ ಹೊಟ್ಟೆಯು ದಪ್ಪನಾಗಿರುತ್ತದೆ. ಗಣಪತಿಯು ಸರ್ವವನ್ನೂ ತನ್ನೊಳಗೆ ಅಡಕಮಾಡಿಕೊಂಡಿರುತ್ತಾನೆ.

**ಕೋಟಿಸೂರ್ಯಸಮಪ್ರಭ :** ಕೋಟಿಸೂರ್ಯ ಮಹಾತೇಜಸ್ವಿಯಾಗಿರುವ ದೇವನಿವನು.

**ದೇವ :** ಸ್ವಯಂ ಜ್ಯೋತಿ: ಸ್ವರೂಪನಾದ ದೇವನೆಂದರೆ ಗಣಪತಿ.
ಪೂಜ್ಯನಾದ ಗಣಪತಿಯೇ, ನನ್ನ ಕೆಲಸಕಾರ್ಯಗಳೆಲ್ಲವೂ ಸುಗಮವಾಗುವಂತೆ, ಅಡ್ಡಿಗಳು ಬಾರದಂತೆ ನಡೆಸಿಕೊಡು ಎಂದು ಪ್ರಾರ್ಥನೆ.

ಸರ್ವಸಿದ್ಧಿಗಾಗಿ ಈ ಸ್ತೋತ್ರವನ್ನು ಪಠಿಸಬೇಕು.

* **ಆದರ್ಶದಿಂದ ಕೂಡಿದ ವ್ಯಕ್ತಿ ಒಂದು ಸಾವಿರ ತಪ್ಪುಗಳನ್ನು ಮಾಡಿದರೆ, ಆದರ್ಶವಿಲ್ಲದ ವ್ಯಕ್ತಿಯು ಐವತ್ತು ಸಾವಿರ ತಪ್ಪುಗಳನ್ನು ಮಾಡುತ್ತಾನೆ. ಆದ್ದರಿಂದ ಆದರ್ಶವನ್ನು ಇಟ್ಟುಕೊಳ್ಳುವುದು ಒಳ್ಳೆಯದು.**
* **ಜೀವನವೆಂಬುದು ಕಠಿಣ ಸತ್ಯ. ಧೈರ್ಯವಾಗಿ ಅದನ್ನು ಎದುರಿಸಿ. ನಿಮ್ಮ ಮಾರ್ಗದಲ್ಲಿ ಮುಂದುವರೆಯಿರಿ. ಅದು ಅಭೇದ್ಯವಾಗಿರಬಹುದು. ಆದರೆ ಆತ್ಮ ಅದಕ್ಕಿಂತ ಬಲಯುತವಾದುದು.**

**–ಸ್ವಾಮಿ ವಿವೇಕಾನಂದ**

# ಅಭಿನವ ಭಾರತಿ ಪ್ರೌಢಶಾಲೆಯಲ್ಲಿ ಗಣಪತಿ ಪ್ರತಿಷ್ಠಾಪನೆ

ಅಭಿನವ ಭಾರತಿ ಶಿಕ್ಷಣ ಸಮೂಹ ಸಂಸ್ಥೆಗಳಲ್ಲಿ ಒಂದಾಗಿರುವ ಅಭಿನವ ಭಾರತಿ ಪ್ರೌಢಶಾಲೆಯಲ್ಲಿ ಭಾದ್ರಪದ ಮಾಸದ ಶುಕ್ಲ ಪಕ್ಷದ ಚೌತಿಯ ದಿನದಂದು (10–9–21) ವಿಘ್ನ ವಿನಾಯಕನಾದ ಗಣಪತಿಯ ಮೂರ್ತಿಯನ್ನು ಶ್ರದ್ಧಾ ಭಕ್ತಿಯಿಂದ ಪ್ರತಿಷ್ಠಾಪಿಸಲಾಯಿತು. ಅಭಿನವ ಭಾರತಿ ಶಾಲೆಯು ಆರಂಭಗೊಂಡ ವರ್ಷದಿಂದಲೂ, ಈ ದಿನದಂದು ಗಣಪತಿಯನ್ನು ಪ್ರತಿಷ್ಠಾಪಿಸಿ, ವಿಸರ್ಜಿಸುವ ಕಾರ್ಯಕ್ರಮವು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಸಂಸ್ಥೆಯ ಸಂಸ್ಥಾಪಕರಾದ ಪರಮ ಪ್ರಭು ವೆಂಕಟೇಶ್ವರನಲ್ಲಿ ಐಕ್ಯವಾಗಿರುವ ಪರಮ ಪೂಜ್ಯ ಶ್ರೀ ಶ್ರೀ ಅನಂತಕುಮಾರ ರವರ ದಿವ್ಯ ಸಾನಿಧ್ಯದೊಂದಿಗೆ ಅವಿಚ್ಛಿನ್ನವಾಗಿ ನಡೆದುಕೊಂಡು ಬರುತ್ತಿದ್ದ ಈ ದೈವ ಕಾರ್ಯವನ್ನು ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಶಿವಮೂರ್ತಿ ಕೀಲಾರರವರು, ಪರಂಪರಾಗತವಾಗಿ ಮುನ್ನಡೆಯುತ್ತಿರುವುದು ಶ್ಲಾಘನೀಯ. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಅಂಜಲಿ ಜೋಷಿಯವರು ಮುತುವರ್ಜಿ ಕಾರ್ಯಕ್ರಮದ ಯಶಸ್ಸಿಗೆ ಮುಖ್ಯ ಕಾರಣ.



ಶಾಲೆಗಳಲ್ಲಿ ಗಣಪತಿಯನ್ನು ಪ್ರತಿಷ್ಠಾಪಿಸುವ ಉದ್ದೇಶದ ಸ್ಪಷ್ಟ ಅರಿವಿದ್ದ ಶ್ರೀ ಸ್ವಾಮೀಜಿಯವರು ವಿದ್ಯೆಯ ಅಧಿದೇವರಾದ ಗಣೇಶನನ್ನು ವಿದ್ಯಾರ್ಥಿಗಳು ಭಕ್ತಿಯಿಂದ ಪೂಜಿಸಿದರೆ ಭಗವಂತನ ಜ್ಞಾನ ಸಂಚಲನಗೊಂಡು ಮಕ್ಕಳು ವಿದ್ಯಾರ್ಜನೆಯಲ್ಲಿ ಯಶಸ್ವಿಯಾಗುವರೆಂದು ನಂಬಿದ್ದರು. ಗಣೇಶನೆಂದರೆ ಮಕ್ಕಳಿಗೆ ಸಹಜವಾಗಿ ವಿಶೇಷ ಅಕ್ಕರೆ, ಪ್ರೀತಿ. ಆ ಪ್ರೀತಿಯನ್ನೆ ಭಕ್ತಿಯನ್ನಾಗಿ ಪರಿವರ್ತಿಸಿ ತನ್ಮೂಲಕ ಮಕ್ಕಳಲ್ಲಿ ವಿದ್ಯೆಯನ್ನು ಸಾಕ್ಷಾತ್ಕರಿಸುವುದು ಶ್ರೀ ಸ್ವಾಮೀಜಿಯವರ ಆಶಯವಾಗಿತ್ತು. ಕೊರೋನಾದ ಕಾರಣದಿಂದ ಕಳೆದೆರಡು ವರ್ಷಗಳಿಂದ ವಿದ್ಯಾರ್ಥಿಗಳ ಭಾಗವಹಿಸುವಿಕೆ ಸಮರ್ಪಕವಾಗಿಲ್ಲದೇ, ಈ ಹಬ್ಬದ ಸಂಭ್ರಮ ಸ್ವಲ್ಪ ಮಂಕಾಗಿದ್ದರೂ ಪ್ರತೀ ವರ್ಷದಂತೆ ಗಣಪತಿಯನ್ನು ಕೂರಿಸಿ ಎಲ್ಲಾ ವಿಧಿ ವಿಧಾನಗಳನ್ನು ಚಾಚೂ ತಪ್ಪದೇ ನಿರ್ವಹಿಸಿ ಭಗವಂತನ ಶಕ್ತಿಯ ತರಂಗಗಳು ಶಾಲೆಯನ್ನು ಆವರಿಸುವಂತೆ ಹಾರೈಸಲಾಯಿತು. ಈ ವರ್ಷ ಶಾಲೆಯಲ್ಲಿ ಮಕ್ಕಳ ಉಪಸ್ಥಿತಿ ಇದ್ದುದ್ದರಿಂದ ಮುನ್ನೆಚ್ಚರಿಕೆಯೊಂದಿಗೆ ದೈಹಿಕ ಅಂತರವನ್ನು ಕಾಯ್ದುಕೊಂಡು ತಮ್ಮ ಶಾಲೆಯ ಗಣಪನನ್ನು ಪೂಜಿಸಲು ಅವಕಾಸ ಮಾಡಿಕೊಡಲಾಯಿತು. ಪ್ರಥಮ ಪೂಜಿತ ಗಣಪನನ್ನು ಭಕ್ತಿ ಶ್ರದ್ಧೆಗಳಿಂದ ತಮ್ಮ ತಮ್ಮ ಮನೆಗಳಿಂದ ತಂದ ಹೂಗಳಿಂದ ಪೂಜಿಸಿ ಸಂಭ್ರಮಿಸಿ ದರು. ಪ್ರೌಢಶಾಲೆಯ ಶಿಕ್ಷಕ ವೃಂದದವರು ಈ ಪೂಜಾ ಕಾರ್ಯದಲ್ಲಿ ಕ್ರಿಯಾಶೀಲತೆ ಯಿಂದ ಭಾಗವಹಿಸಿ ದೈವ ಕೃಪೆಗೆ ಪಾತ್ರರಾದರು. ಶಾಲೆಗೆ ಬರಬಹುದಾದ ಎಲ್ಲಾ ವಿಘ್ನಗಳು ಮಂಜಿನಂತೆ ಕರಗಿ ಶಾಲೆಗೆ ಹೆಚ್ಚು ಮಕ್ಕಳು ದಾಖಲಾಗಿ, ಒಳ್ಳೆಯ ಫಲಿತಾಂಶ ಬರುವಂತಾಗಿ ಶಾಲೆಯು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಶಿಕ್ಷಕ ವೃಂದವರು ಗಣೇಶನಲ್ಲಿ ಭಕ್ತಿಯಿಂದ ಪ್ರಾರ್ಥಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕ ವೃಂದದವರು ಗಣಪನನ್ನು ಶ್ರದ್ಧಾ ಭಕ್ತಿಯಿಂದ ಪೂಜಿಸಿ ಸಿಹಿ ಹಂಚಿ ಈ ದೇವತಾ ಕಾರ್ಯಕ್ಕೆ ಮೆರಗನ್ನು ತಂದರು.

ಮರುದಿನ ಮಂಗಳಾರತಿ ಬಳಿಕ ಕೋಣನಹಳ್ಳಿ ಕೆರೆಯಲ್ಲಿ ಸಕಲ ವಿಧಿ ವಿಧಾನದೊಂದಿಗೆ ಗಣಪನ ಮೂರ್ತಿಯನ್ನು ವಿಸರ್ಜಿಸಲಾಯಿತು. ಮತ್ತು ಪ್ರಸಾದವನ್ನು ವಿನಿಯೋಗಿಸಲಾಯಿತು.



–**ಪಿ. ಚಕ್ರೀನಂದನ್**, ಶಿಕ್ಷಕರು, ಅಭಿನವ ಭಾರತಿ ಪ್ರೌಢಶಾಲೆ, ಆಂಗ್ಲ ಮಾಧ್ಯಮ, ಮಂಡ್ಯ.





# ಆತ್ಮವಿಶ್ವಾಸ

ಮನಃ ಶಾಸ್ತ್ರದಲ್ಲಿ "ಆತ್ಮವಿಶ್ವಾಸ" ಎಂದರೆ ವ್ಯಕ್ತಿಯು ತನ್ನನ್ನು ತಾನು ಭಾವನಾತ್ಮಕವಾಗಿ ಮೌಲ್ಯಮಾಪನ ಮಾಡಿಕೊಂಡಿರುವ ರೀತಿಯನ್ನು ವಿವರಿಸುವಂತದ್ದು. ಅಂದರೆ ಒಬ್ಬ ವ್ಯಕ್ತಿ ತನ್ನ ಬಗ್ಗೆ ತಾನು ಏನೆಂದುಕೊಂಡಿರುತ್ತಾನೊ ತನ್ನ ವ್ಯಕ್ತಿತ್ವದ ಕುರಿತು ತನ್ನ ನಿರ್ಣಯಗಳೇನಿರುತ್ತದೆಯೋ ಅದನ್ನು ಆತ್ಮ ವಿಶ್ವಾಸವು ಒಳಗೊಂಡಿರುತ್ತದೆ. ಹೊರ ಪ್ರಪಂಚದಲ್ಲಿ ಘಟಿಸುವ ಘಟನೆಗಳು, ಸಂದರ್ಭಗಳೇನೆ ಇರಲಿ ನಮ್ಮ ಆತ್ಮ ಗೌರವವು ಬಹಳ ಮೂಲಭೂತವಾದ ಸಂಗತಿ. ಯಾವುದೇ ಯಶಸ್ಸಿನ ಮೂಲವನ್ನು ತೆಗೆದುಕೊಂಡರೂ ಅಲ್ಲಿ "ಆತ್ಮ ವಿಶ್ವಾಸ" ಎಂಬುದು ಎದ್ದು ಕಾಣುತ್ತದೆ. ಯಾವ ಪ್ರಯತ್ನವನ್ನು ಮಾಡದೆಯೇ ನಮ್ಮಿಂದಾಗುವುದಿಲ್ಲಾ. ಎಂದು ಒಪ್ಪಿಕೊಳ್ಳಲೇ ಬಾರದು.ಆತ್ಮ ವಿಶ್ವಾಸ ವೊಂದಿದ್ದರೆ ಪ್ರತಿಯೊಂದು ಕಠಿಣ ಕಾರ್ಯವು ಸುಲಬವೆಂದು ತೋರುತ್ತದೆ. ಆರಂಭದಲ್ಲಿ ನಮ್ಮ ಪ್ರಯತ್ನಗಳು ವಿಫಲವಾಗಬಹುದು. ಆದರೆ ಎದೆಗುಂದದೆ ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ ನಮ್ಮ ಪ್ರಯತ್ನವನ್ನು ಮುಂದುವರೆಸಿದರೆ ಮಾತ್ರ ಯಶಸ್ಸು ದೊರೆಯುತ್ತದೆ. ನಾವು ಗೆಲ್ಲಲೇಬೇಕೆಂಬ ಸಂಕಲ್ಪದೊಂದಿಗೆ ಮಾಡುವ ಪ್ರಯತ್ನಗಳಲ್ಲಿ ಖಂಡಿತವಾಗಿ ಗೆಲುವು ದೊರೆಯುತ್ತದೆ. ಹೀಗಾಗಿ ನಾವು ಯಾವದೇ ಕೆಲಸಕ್ಕೆ ಕೈ ಹಾಕುವುದಿದ್ದರೆ ಅದಕ್ಕೆ ಬೇಕಾದ ಸಕಾರಾತ್ಮಕ ಮನಸ್ಥಿತಿ ರೂಪಿಸಿಕೊಳ್ಳಬೇಕು. ಅಂದಾಗ ಮಾತ್ರ ನಮಗೆ ಯಶಸ್ಸು ಪ್ರಾಪ್ತಿಯಾಗುತ್ತದೆ. ಒಂದು ವೇಳೆ ಪ್ರಯತ್ನದಲ್ಲಿ ವಿಫಲವಾಗಿ ನಿರಾಸೆಯಾದರು ಅದರಿಂದ ಹೊಸ ಪಾಠ ಕಲಿತಂತಾಗುತ್ತದೆ. ಆದುದರಿಂದ ನಾವು ನಮ್ಮಲ್ಲಿ ಯಾವಾಗಲು ಧನಾತ್ಮಕವಾಗಿ ಆಲೋಚನೆಗಳನ್ನು ಮಾಡಬೇಕು. ಮತ್ತು ಇತರರಲ್ಲೂ ಧನಾತ್ಮಕ ಆಲೋಚನೆಗಳನ್ನು ಬಿತ್ತಬೇಕು.

ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಲು ನಾವು ಮಾಡಬೇಕಾದ ಪ್ರಯತ್ನಗಳೇನು ಎಂಬ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

## ನಮ್ಮ ಸುತ್ತಾ ಸಕಾರಾತ್ಮಕ ವಾತಾವರಣ ನಿರ್ಮಾಣ ಮಾಡಿಕೊಳ್ಳುವುದು.

ಯಾವಾಗಲು ಧನಾತ್ಮಕವಾಗಿ ಯೋಚನೆಗಳನ್ನು ಮಾಡುವುದರಿಂದ ನಮ್ಮಲ್ಲಿ ಹೊಸ ಹೊಸ ಕಲ್ಪನೆಗಳು ಮೊಳಕೆಯೊಡೆಯುತ್ತವೆ.ಪ್ರತಿಯೊಂದಕ್ಕು ಕೊಂಕು ಮಾತನಾಡುವವರು ಮತ್ತು ಋಣಾತ್ಮಕ ಆಲೋಚನೆಗಳನ್ನು ಬಿತ್ತುವವರಿಂದ ದೂರವಿರಬೇಕು. ಅದಕ್ಕಿಂತ ಹೆಚ್ಚಾಗಿ ಅಂತವರೊಂದಿಗೆ ನಿಮ್ಮ ಗುರಿ ಹಾಗೂ ಕಲ್ಪನೆಗಳ ಬಗ್ಗೆ ಯಾವುದೇ ವಿಚಾರಗಳನ್ನು ಹಂಚಿಕೊಳ್ಳಬಾರದು. ಒಂದುವೇಳೆ ಅವರಾಡುವ ಮಾತುಗಳಿಂದ ನಮ್ಮ ಆತ್ಮ ವಿಶ್ವಾಸದ ಮೇಲೆ ಒಡೆತಬೀಳಬಹುದು ಆದುದರಿಂದ ಈ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು.

## ಸ್ಪಷ್ಟ ಗುರಿಯೊಂದಿಗೆ ಪ್ರಯತ್ನ ಪ್ರಾರಂಭಿಸಬೇಕು.

ನಾವು ಯಾವುದೇ ಕೆಲಸವನ್ನು ಪ್ರಾರಂಭಮಾಡುವಾಗ ಸ್ಪಷ್ಟ ಗುರಿಯೊಂದಿಗೆ ಪ್ರಾರಂಭಿಸಬೇಕು. ಇಲ್ಲಿ ಮುಖ್ಯವಾಗಿ ನಾವು ಸಾಗಬೇಕಾದ ಹಾದಿಯ ಬಗ್ಗೆ ನಿಖರವಾದ ಯೋಜನೆಯನ್ನು ರೂಪಿಸಿಕೊಳ್ಳಬೇಕು. ಅದರಲ್ಲೂ ಸಣ್ಣ ಗುರಿಯೊಂದಿಗೆ ನಮ್ಮ ಪ್ರಯತ್ನವನ್ನು ಪ್ರಾರಂಬಿಸಬೇಕು. ಇದರಿಂದ ಕ್ರಮೇಣ ನಮ್ಮ ಆತ್ಮ ವಿಶ್ವಾಸ ಹೆಚ್ಚುತ್ತಾ ಹೋಗುತ್ತದೆ. ಒಂದುವೇಳೆ ದೊಡ್ಡ ಗುರಿಯನ್ನು ಹೊಂದಿದ್ದರು ಅದನ್ನು ಮುಟ್ಟಲು ಬೇಕಾದ ತಯಾರಿ ಮಾಡಿಕೊಳ್ಳಬೇಕು. ಅದರಂತೆ ನಮ್ಮ ಗುರಿಯನ್ನು ತಲುಪುಬೇಕು.

## ಭಯವನ್ನು ದೂರವಿಡಬೇಕು.

ಯಾವುದೇ ಕಾರ್ಯಕ್ಕೆ ಇಳಿಯುವಾಗ ನಮ್ಮಲ್ಲಿ ಭಯವಿದ್ದೇಇರುತ್ತದೇ. ಆದರೆ ಅದೇ ಭಯದ ಹಿಂದೆ ನಮ್ಮ ಗೆಲುವು ಇರುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಮ್ಮಲ್ಲಿ ವೈಫಲ್ಯದ ಭಯ ಕಾಡಿದಾಗೆಲ್ಲ ಸ್ವಯಂ ಪ್ರೇರಣೆಯನ್ನು ನೀಡಿ ಭಯವನ್ನು ತೊಡೆದುಹಾಕಬೇಕು. "ಧೈರ್ಯಂ ಸರ್ವತ್ರ ಸಾಧನಂ" ಎಂಬಂತೆ ಧೈರ್ಯವೇ ನಮ್ಮ ಆತ್ಮ ವಿಶ್ವಾಸದ ಬುನಾದಿ.

## ನಮ್ಮ ಮೇಲೆ ನಮಗೆ ನಂಬಿಕೆ ಇರಬೇಕು.

ನಮ್ಮನ್ನು ನಾವು ನಂಬುವಷ್ಟು ಪ್ರಪಂಚದಲ್ಲಿ ಬೇರೆ ಯಾರು ನಮ್ಮನ್ನು ನಂಬುವುದಿಲ್ಲಾ ಎಂಬುದು ಸದಾ ನಮ್ಮ ನೆನಪಿನಲ್ಲಿರಬೇಕು. ಹೀಗಾಗಿ ನಮ್ಮ ನಂಬಿಕೆಯೇ ನಮ್ಮ ಯಶಸ್ಸು. ಅದು ಸೋಲಾಗಲಿ ಗೆಲುವಾಗಲಿ ನಂಬಿಕೆಯನ್ನು ಮಾತ್ರ ಕಳೆದುಕೊಳ್ಳಬಾರದು. ಸೋಲು ಗೆಲುವುಗಳ

ಲೆಕ್ಕಾಚಾರ ನಿರ್ಧಾರವಾಗುವುದೇ ನಮ್ಮ ಆತ್ಮ ವಿಶ್ವಾಸದ ಮೇಲೆ. ಯಾರು ಆತ್ಮ ವಿಶ್ವಾಸದಿಂದ ಮುನ್ನಡೆಯುತ್ತಾರೋ ಅವರು ಗೆದ್ದೇ ಗೆಲ್ಲುತಾರೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಪ್ರಪಂಚದಲ್ಲಿ ಸೋತು ಗೆದ್ದವರಿದ್ದಾರೆ, ಸೋತೆ ಎಂಬುದನ್ನು ಬದಿಗಿಟ್ಟು ಗೆದ್ದೆಗಲುವೆನೆಂಬ ಆತ್ಮ ವಿಶ್ವಾಸದಿಂದ ಮುನ್ನಡೆದರೆ ಸೋಲೆ ಗೆಲುವಾಗಿ ನಮಗೆ ದೊರೆಯುತ್ತದೆ.

## ಹೋಲಿಕೆ ಮಾಡಿಕೊಳ್ಳುವುದು.

ನಮ್ಮಲ್ಲಿರುವ ದೊಡ್ಡ ದೌರ್ಬಲ್ಯವೆಂದರೆ ನಮ್ಮನ್ನು ನಾವು ಇನ್ನೊಬ್ಬರೊಂದಿಗೆ ಹೋಲಿಕೆ ಮಾಡಿಕೊಳ್ಳುವುದು. ನನಗಿಂತ ಅವನು/ಅವಳು ಸುಂದರವಾಗಿದ್ದಾರೆ, ಅವರು ನನಗಿಂತ ತಂಬಾ ಒಳ್ಳೆಯ ಬಟ್ಟೆಗಳನ್ನು ಧರಿಸುತ್ತಾರೆ, ಅವರು ನನಗಿಂತ ತುಂಬಾ ಶ್ರೀಮಮತರಿದ್ದಾರೆ, ಹೀಗೆ ನಾನಾ ಕಾರಣಗಳಿಂದ ನಮ್ಮನ್ನು ನಾವು ಇನ್ನೊಬ್ಬರೊಂದಿಗೆ ಹೋಲಿಕೆ ಮಾಡಿಕೊಳ್ಳುತ್ತೇವೆ. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಏನಾದರೊಂದು ವಿಶೇಷತೆ ಇದ್ದೇ ಇರುತ್ತದೆ. ನಮ್ಮಲಿರುವ ದೌರ್ಬಲ್ಯಗಳನ್ನು ಬದಿಗಿಟ್ಟು ನಮ್ಮ ವಿಶೇಷತೆಗಳ ಬೆಳವಣಿಗೆ ಬಗ್ಗೆ ಗಮನ ಹರಿಸಿದರೆ ನಮ್ಮ ಆಸಕ್ತಿಯ ಯಾವುದಾದರೊಂದು ಕ್ಷೇತ್ರದಲ್ಲಿ ಯಶಸ್ಸು ಖಂಡಿತವಾಗಿ ದೊರೆಯುತ್ತದೆ. ಎಷ್ಟೋ ಅಂಗವಿಕಲರು ತಮ್ಮಲ್ಲಿರುವ ಅಂಗವೈಕಲ್ಯದ ಕಹಿಯನ್ನು ಬದಿಗಿಟ್ಟು ನಾನಾ ಕ್ಷೇತ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ಕ್ರೀಡಾಕ್ಷೇತ್ರದಲ್ಲೂ ಸಹ ಸಾಧನೆಗೈದಿರುವ ಉದಾಹರಣೆಗಳು ನಮ್ಮ ಮುಂದಿವೆ. ಈ ಹೋಲಿಕೆಯ ಮನಸ್ತಿತಿ ಎಂಥಹ ಅಪಾಯವನ್ನು ತಂದೊಡ್ಡುತ್ತಿದೆ ಎಂದರೆ ನಮ್ಮ ಮಕ್ಕಳನ್ನು ನಾವು ಬಾಲ್ಯದಲ್ಲೇ ಬೇರೆ ಮಕ್ಕಳೊಂದಿಗೆ ಹೋಲಿಕೆ ಮಾಡಿ ನೀ ಅವನಷ್ಟು ಬುದ್ಧಿವಂತನಲ್ಲ, ಅವನು ಪರೀಕ್ಷೆಯಲ್ಲಿ ಉತ್ತಮ ಅಂಕಗಳೊದಿಗೆ ಪಾಸಾಗಿದ್ದಾನೆ ನೀನು ದಡ್ಡ ಎಂದೆಲ್ಲಾ ಮಕ್ಕಲನ್ನು ಬೈದು ಅವರಲ್ಲಿರುವ ನೈಜ ಪ್ರತಿಭೆಯನ್ನು ಬೆಳಕಿಗೆ ತರದೆ ಅದನ್ನು ಬಾಲ್ಯದಲ್ಲೇ ಚಿವುಟಿ ಹಾಕುತ್ತಿದ್ದೇವೆ. ಪ್ರತಿ ಮಕ್ಕಳಲ್ಲೂ ವಿಷೇಷತೆ ಇರುತ್ತದೆ ಅದನ್ನು ನಾವು ಗುರುತಿಸಿ ಆನಿಟ್ಟಿನಲ್ಲಿ ಅವರಿಗೆ ಪ್ರೋತ್ಸಾಹ ನೀಡಬೇಕು. ಕೇವಲ ಅಂಕ ಪಟ್ಟಿಯೊಂದೆ ನಮ್ಮ ಜೀವನವನ್ನು ನಿರ್ಧರಿಸುವುದಿಲ್ಲಾ. ಶೈಕ್ಷಣಿಕ ಪರೀಕ್ಷೆಯಲ್ಲಿ ಫೇಲಾದ ಎಷ್ಟೋ ಜನರು ಜೀವನದ ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದಿರುವ ಉದಾಹರಣೆ ನಮ್ಮ ಮುಂದಿವೆ. ನೋಬೆಲ್ ಪಾರಿತೋಷಕವನ್ನು ಪಡೆದ "ಆಲ್ಬರ್ಟ್ ಐನ್ಸ್ಟೈನ್" ಶಾಲೆಯೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಅವರು ಶಿಕ್ಷಕರಿಗೆ ನಾನಾ ಪ್ರಶ್ನೆಗಳನ್ನು ಕೇಳುತ್ತಿದ್ದರಂತೆ. ಒಂದು ದಿನ ಶಾಲೆಯ ಮುಖ್ಯೋಪಧಾಯರು ಅವರ ಕೈಗೆ ಒಂದು ಪತ್ರವನ್ನಿಟ್ಟು ಇದನ್ನು ನಿಮ್ಮ ತಾಯಿಗೆ ಕೊಡು ಎಂದು ಹೇಳಿ ಕಳುಹಿಸಿದರಂತೆ ಐನ್‌ಸ್ಟೈನ್ ಅದನ್ನು ಜೋಪಾನವಾಗಿ ತಂದು ತಾಯಿಯ ಕೈಗಿತ್ತಾಗ ಅವರ ತಾಯಿ ಆ ಪತ್ರವನ್ನು ತೆರೆದು ಓದುತ್ತಾರೆ. ಆಗ ಬಾಲಕ ಐನಸ್ಟೈನ್ ತನ್ನ ತಾಯಿಯನ್ನು ಅಮ್ಮ ಆಪತ್ರದಲ್ಲಿ ಏನು ಬರೆದಿದ್ದಾರೆ ಎಂದು ಕೇಳಿದಾಗ, ಅವರ ತಾಯಿ ಹೇಳಿದರಂತೆ ಮಗು ನಿಮ್ಮ ಮುಖ್ಯೋಪಧ್ಯಾಯರು ಬರೆದಿದ್ದಾರೆ ನಿಮ್ಮ ಮಗನಿಗೆ ಪಾಠ ಹೇಳಿಕೊಡುವಷ್ಟು ಬುದ್ಧಿವಂತ ಶಿಕ್ಷಕರು ನಮ್ಮ ಶಾಲೆಯಲ್ಲಿ ಇಲ್ಲ. ನಿಮ್ಮ ಮಗನನ್ನು ಬೇರೆ ಶಾಲೆಗೆ ಸೇರಿಸಿ ಇಲ್ಲಾ ಅವನಿಗೆ ನೀವೆ ಪಾಠ ಹೇಳಿಕೊಡಿ ಎಂದು. ಮುಂದೆ ಐನ್‌ಸ್ಟೈನ್ ಸಾಧನೆಗೈದು ನೋಬೆಲ್ ಪಾರಿತೋಷಕವನ್ನು ಪಡೆದ ಮೇಲೆ ಒಂದು ದಿನ ಮನೆಯಲ್ಲಿ ಯಾವುದೋ ವಸ್ತುವನ್ನು ಹುಡುಕುತ್ತಿದ್ದಾಗ. ಅವರ ತಾಯಿಯ ಹಳೆಯ ಪೆಟ್ಟಿಗೆ ಕಣ್ಣಿಗೆ ಕಾಣುತ್ತದೆ, ಆ ಪಟ್ಟಿಗೆಯನ್ನು ತೆರೆದು ನೋಡಿದ್ದಾಗ ಅವರ ತಾಯಿಯ ಕೆಲವು ವಸ್ತುಗಳ ಜೊತೆ ಅವರ ಬಾಲ್ಯದಲ್ಲಿ ಅವರ ಮುಖ್ಯೋಪಧ್ಯಾಯರು ನೀಡಿದ್ದ ಪತ್ರವು ಅದರಲ್ಲಿ ಇರುತ್ತದೆ. ಅಂದು ಆ ಪತ್ರವನ್ನು ತೆರೆದು ನೊಡದೆ ಇದ್ದ ಐನ್ಸಟೈನ್ ಕುತೂಹಲದಿಂದ ಪತ್ರವನ್ನು ತೆರೆದು ಓದುತ್ತಾರೆ, ಪತ್ರ ಓದುತ್ತಿದ್ದಂತೆ ಅವರ ಕಣ್ಣಲಿಗಳು ತುಂಬಿಬಂದು ತಮ್ಮ ತಾಯಿಯ ಬಗ್ಗೆ ಹೆಮ್ಮೆ ಎನಿಸುತ್ತದೆ. ಅಂದು ಬರೆದ ಆಪತ್ರದಲ್ಲಿ ಅವರ ಶಾಲೆಯವರು ಹೀಗೆ ಬರೆದಿರುತ್ತಾರೆ, ನಿಮ್ಮ ಮಗ ಶತದಡ್ಡ, ಅವನು ಬೇಡದ ತರಲೆ ಪ್ರಶ್ನೆಗಳನ್ನು ಕೇಳುತ್ತಾನೆ ಪಠ್ಯದ ಬಗ್ಗೆ ಆಶಕ್ತಿ ಇಲ್ಲಾ. ಅನನ್ನು ನಮ್ಮ ಶಾಲೆಯಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ ಅವನ ವಿದ್ಯಾಭ್ಯಾಸಕ್ಕೆ ಬೇರೆ ವ್ಯವಸ್ಥೆ ಮಾಡಿಕೊಳ್ಳಿ ಎಂದು ಬರೆದಿರುತ್ತಾರೆ. ಇದಲ್ಲವೇ ಒಬ್ಬ ತಾಯಿಯ ಕರ್ತವ್ಯ, ಅಂದು ಶಾಲೆಯ ಪತ್ರದ ಆಧಾರದ ಮೇಲೆ ಅವರ ತಾಯಿ ಐನ್‌ಸ್ಟೈನ್ ನ್ನು ಬೈದಿದ್ದರೆ ಬಹುಶಃ ಆತ ಆ ಮಟ್ಟದ ಸಾಧನೆ ಮಾಡಲು ಸಾಧ್ಯವಾಗುತ್ತಿರಲಿಲ್ಲವೇನೋ. ಪ್ರತಿಯೊಬ್ಬ ಪೋಷಕರ ನಿಜವಾದ ಕರ್ತವ್ಯವೇನೆಂದರೆ ತಮ್ಮ ಮಕ್ಕಳಲ್ಲಿ ಆತ್ಮ ವಿಶ್ವಾಸವನ್ನು ತುಂಬುವುದು, ಅವರಲ್ಲಿರುವ ನೈಜ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದು. ಬಾಲ್ಯದಲ್ಲೇ ಈರೀತಿಯ ಬೆಳವಣಿಗೆಯಿಂದ ಮುಂದೆ ತಮ್ಮ ಮಕ್ಕಳ

ಯಶಸ್ಸಿನ ಮೆಟ್ಟಿಲಾಗಿ ನಿಲ್ಲುವುದು.

ಪ್ರತಿಂಯೊಬ್ಬ ವ್ಯಕ್ತಿಂಯು ಉತ್ತಮ ಜೀವನ ರೂಪುಗೊಳ್ಳುವುದು ಅವನ ಆತ್ಮ ವಿಶ್ವಾಸದ ಆಧಾರದ ಮೇಲೆ. ಆದುದರಿಂದ ಪ್ರತಿಯೊಬ್ಬರು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು ಮತ್ತು ಇತರರಲ್ಲಿಯೂ ಸಹ ಆತ್ಮ ವಿಶ್ವಾಸವನ್ನು ತುಂಬುವ ಕೆಲಸ ಮಾಡಬೇಕು.

**–ವಿಜಯ್ ಕುಮಾರ್**
ಅಭಿನವ ಭಾರತಿ ಕಾಲೇಜ್ ಆಫ್ ಫಾರ್ಮಸಿ
ಮಂಡ್ಯ.

# ಶ್ರೀ ಶಂಕರ ಸ್ತೋತ್ರಂ



**ಶ್ರುತಿಸ್ಮೃತಿಪುರಾಣಾಮಾಲಯಂ ಕರುಣಾಲಯಮ್**
**ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಮ್**

**ಅನ್ವಯ:** ಶ್ರುತಿಸ್ಮೃತಿಪುರಾಣಾನಾಮ್, ಆಲಯಂ, ಕರುಣಾಲಯಮ್, ಲೋಕಶಂಕರಮ್, ಶಂಕರಂ, ಭಗವತ್ಪಾದಂ, ನಮಾಮಿ

ಶ್ರುತಿ ಪುರಾಣಗಳಿಗೆ ಆಶ್ರಯರಾಗಿರುವಂಥ, ಕಾರುಣ್ಯದ ನಿಧಿಗಳಾಗಿರುವಂಥ, ಲೋಕಕ್ಕೆ ಶಾಂತಿಯನ್ನು ಕೊಡುವಂಥ, ಶ್ರೀ ಶಂಕರಭಗವತ್ಪಾದಾಚಾರ್ಯರವರನ್ನು ನಾನು ನಮಸ್ಕರಿಸುತ್ತೇನೆ.

**ತಾತ್ಪರ್ಯಾರ್ಥ :** ಈ ಶ್ಲೋಕವು ಅತ್ಯಂತ ಪ್ರಸಿದ್ಧವೂ ಜನಪ್ರಿಯವೂ ಆಗಿರುತ್ತದೆ. ಈ ಶ್ಲೋಕದಲ್ಲಿ ಶ್ರೀ ಶಂಕರಿಗೆ ನಾಲ್ಕು ವಿಶೇಷಗಳನ್ನು ಹೇಳಿದೆ.

**ಶ್ರುತಿಸ್ಮೃತಿಪುರಾಣಾಮಾಲಯಂ :** ಶ್ರೀ ಶಂಕರರೆಂದರೆ ಶ್ರುತಿಗಳಿಗೂ ಸ್ಮೃತಿಗಳಿಗೂ ಪುರಾಣಗಳಿಗೂ ಆಲಯ ರಾಗಿರುವರು. ಶ್ರೀ ಶಂಕರರೇ ವೇದಗಳಿಗೂ ನಾರಾರು ಸ್ಮೃತಿಗಳಿಗೂ ಹಾಗೂ ಪುರಾಣಗಳಿಗೂ ಆಶ್ರಯರಾಗಿ ರುತ್ತಾರೆ. ಶ್ರೀ ಶಂಕರರ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಇದನ್ನು ನವು ನೋಡಬಹುದು.

**ಕರುಣಾಲಯಂ :** ಶ್ರೀ ಶಂಕರರು ಕಾರುಣ್ಯಸಾಗರರೇ ಆಗಿರುತ್ತಾರೆ. ಲೋಕ ಕಲ್ಯಾಣಕ್ಕಾಗಿಯೇ ಶ್ರೀ ಶಂಕರರ ಜೀವನವೆಲ್ಲವೂ ಉಪಯುಕ್ತವಾಗಿದೆ.

**ಲೋಕಶಂಕರಮ್ :** ಆತ್ಮಜ್ಞಾನವನ್ನು ಉಪದೇಶಿಸಿ ಶ್ರೀ ಶಂಕರರು, ಜಗತ್ತಿಗೆ ವೈರಾಗ್ಯಗಳನ್ನೂ ಶ್ರೀ ಶಂಕರರು ಉಪದೇಶಿಸಿರುತ್ತಾರೆ.

**ಭಗವತ್ಪಾದಂ ಶ್ರೀ ಶಂಕರಂ ನಮಾಮಿ :** ಶ್ರೀಶಂಕರರು ಭಗವತ್ಪಾದರೂ ಆಗಿರುತ್ತಾರೆ. ಅಂದರೆ ಪೂಜ್ಯಪಾದರೂ, ಲೋಕವಂದ್ಯರೂ ಆಗಿರುತ್ತಾರೆ.

ಪರಮ ಶಿವನ ಅಂಶಾವತಾರಿಗಳಾದ ಶ್ರೀ ಶಂಕರರು ಕ್ರಿಸ್ತಶಕ ಎಂಟನೆಯ ಶತಮಾನದಲ್ಲಿ ಕೇರಳರಜ್ಯದ ಕಾಲಟಿಯೆಂಬ ಗ್ರಾಮದಲ್ಲಿ ಜನಿಸಿದರು.

**ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್।**
**ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್॥**

ಬ್ರಹ್ಮಾತ್ಮಜ್ಞಾನದಿಂದಲೇ ಅಮೃತತ್ವಪ್ರಾಪ್ತಿ ಎಂಬುದನ್ನು ಸಾರಿದ ಜಗದ್ಗುರು ಶ್ರೀಶಂಕರರಿಗೆ ನಮಸ್ಕಾರಗಳು.

ಆತ್ಮಜ್ಞಾನ ಪ್ರಾಪ್ತಿಗಾಗಿ ಈ ಸ್ತೋತ್ರವನ್ನು ಪಠಿಸಬೇಕು.

★

# ಬಾಗಿದವನು ಬಾಳ್ಯಾನು...

ತಾಮ್ರದ ಕೊಡ ಹಾಗೂ ಪ್ಲಾಸ್ಟಿಕ್ ಕೊಡಗಳಲ್ಲಿಯ ವ್ಯತ್ಯಾಸವೇನು...?

ತಾಮ್ರದ ಕೊಡ ಬಾವಿಯಲ್ಲಿ ಇಳಿದಾಗ ಬಾಗಿ ತನ್ನೊಳಗೆ ಪೂರ್ಣ ನೀರು ತುಂಬಿಕೊಂಡು ಮೇಲೆ ಬರುತ್ತದೆ... ಆದರೆ ಪ್ಲಾಸ್ಟಿಕ್ ಕೊಡ ಹಾಗಲ್ಲ.ನೀರು ತುಂಬಿಸಲು ಪ್ರಯಾಸ ಪಡಬೇಕು... ಬೇಗನೇ ಬಾಗುವುದೂ ಇಲ್ಲ. ಎತ್ತಿ ಕುಕ್ಕಿ ತುಂಬಿಸಬೇಕು. ತುಂಬಿದರೂ ಚೂರು ಕಡಿಮೆಯಾಗಿಯೇ ಮೇಲೆ ಬರುತ್ತದೆ.

ಯಾವುದು ಬಾಗುತ್ತದೆಯೋ... ಅದು ಪೂರ್ಣ ತುಂಬಿಕೊಳ್ಳುತ್ತದೆ. ಯಾವುದು ಬಾಗುವುದಿಲ್ಲವೊ ಅದು ಅಪೂರ್ಣವೇ...

ಇದೇ ಬದುಕಿನ ಸತ್ಯವೂ ಕೂಡ....

ನೈವೇದ್ಯಕ್ಕೆ ನಾವು ಭತ್ತದ ಅಕ್ಕಿಯ ಅನ್ನವನ್ನೇ ಶ್ರೇಷ್ಠ ವೆನ್ನುತ್ತೇವೆ. ಜೋಳದ ರೊಟ್ಟಿ ನೈವೇದ್ಯ ಮಾಡುವುದಿಲ್ಲ..

ಕಾರಣ..

ಭತ್ತದ ತೆನೆಗಳು ತನಗೆ ಜನ್ಮನೀಡಿದ ಭೂತಾಯಿಗೆ ತಲೆಬಾಗಿಸುತ್ತದೆ. ಆದರೆ ಜೋಳದ ತೆನೆ ಕಾಳು ತುಂಬಿಕೊಂಡರೂ ಸಹ ಯಾವ ಕಾರಣಕ್ಕೂ ಭೂಮಿಗೆ ತಲೆ ಬಗ್ಗಿಸದೇ ಆಕಾಶ ನೋಡುತ್ತ ನಿಲ್ಲುತ್ತವೆ.

ಇದರರ್ಥ ಇಷ್ಟೇ... ಸಂಸ್ಕೃತಿಗೆ, ಸಂಪ್ರದಾಯಕ್ಕೆ, ಗುರುಹಿರಿಯರಿಗೆ, ಆ ಭಗವಂತನಿಗೆ, ಭೂ ತಾಯಿಗೆ, ದೇಶಕ್ಕೆ ಹಾಗೂ ಹಲವು ಪೂಜ್ಯರಿಗೆ ತಲೆಬಾಗುವದನ್ನು ನಾವು ಕಲಿಯಬೇಕು.ಆಗಲೇ ಮನುಷ್ಯನ ವ್ಯಕ್ತಿತ್ವ ಬೆಳೆಯುವುದು.. ಅಹಂಕಾರ ಅಧಿಕಾರ ಶಾಶ್ವತವಲ್ಲ... ನಾನು ಎಂಬ ಗರ್ವ ತನ್ನೊಡಲನ್ನೇ ಸುಡುತ್ತದೆ. ಕೋಪ, ಅಪಹಾಸ್ಯ ಅವಮಾನ, ದರ್ಪ, ಹಾಗೂ ಭ್ರಷ್ಟತೆ ಮನುಷ್ಯನ ಸರ್ವನಾಶಕ್ಕೆ ಕಾರಣ..

ಎಲ್ಲವನ್ನೂ ನೋಡುತ್ತಿರುವ

ಆ ಭಗವಂತ ಅಲ್ಲಿ ಕುಳಿತು ನಮ್ಮಾಟವ ನೋಡು ತ್ತಿರುತ್ತಾನೆ...

ಇದು ಅವನ ಮೈದಾನ ನಾವಿಲ್ಲಿ ಆಟಗಾರರಷ್ಟೇ...

ಎಂಬ ಸತ್ಯದ ಅರಿವಾಗಬೇಕು ...
ಜಾಸ್ತಿ ಓದಿದ್ದೀನಿ,
ಎನ್ನುವ ಗರ್ವ ಬೇಡ....
ಓದಲು ಸಾಗರದಷ್ಟಿದೆ ಇನ್ನೂ...
ನಾನೊಬ್ಬನೇ ಎಲ್ಲವನ್ನೂ ಬರೆಯುತ್ತೇನೆ...
ಎನ್ನುವ ಅಹಂ ಬೇಡ....
ದಿನಕ್ಕೆ ಸಾವಿರಾರು ಪುಸ್ತಕಗಳು ಮುದ್ರಣವಾಗುತ್ತಲೇ ಇವೆ... ಎಲ್ಲ ಬಲ್ಲವರಿಲ್ಲ !!
ಬಲ್ಲವರು ಬಹಳಿಲ್ಲ!!!
ಮಗುವಿನಿಂದ ಹಿಡಿದು

ಗುರು ಹಿರಿಯರವರೆಗೂ ನಾವಿನ್ನೂ ಕಲಿಯುವುದು ತುಂಬಾ ಇದೆ..

ಇಷ್ಟೇ ಮುಗಿಯಿತು ರಾತ್ರಿಯಾಯ್ತು ಅಂತ ತಿಳಿದರೆ ಇನ್ನೆಲ್ಲೋ ಬೆಳಕಿನ ಆರಂಭವಾಗಿರುತ್ತದೆ..

ನೀ ಸಾಗುವ ಪಥ ಹೊಸಹೊಸ ಪಾಠಗಳನ್ನು ಕಲಿಸುತ್ತಾ ಅನುಭವಗಳನ್ನು ನೀಡುತ್ತಾ ಸಾಗುತ್ತದೆ, ಕೆಡಕನ್ನು ಒಳಿತನ್ನು ಆಯ್ಕೆ ಮಾಡಿಕೊಳ್ಳುವದು ನಿನಗೆ ಬಿಟ್ಟಿದ್ದು...

ಏಕೆಂದರೆ ಪ್ರತಿಯೊಂದಕ್ಕೂ ಫಲಾಫಲ ನಮಗಿದೆ.
ಆದ್ದರಿಂದ ಯೋಚಿಸಿ ನಡೆಯಬೇಕು...!
ಆಲೋಚಿಸಿ ನುಡಿಯಬೇಕು.

ಗುರು ಕಲಿಸಿದ ವಿದ್ಯೆ..
ತಾಯಿ ನೀಡಿದ ಮಮತೆ..
ತಂದೆ ಹೇಳಿದ ಸಲಹೆ..
ಕಿರಿಯರು ನೀಡಿದ ಪ್ರೀತಿ..
ರೈತ ಕೊಟ್ಟ ಅನ್ನ..
ಯೋಧ ನೀಡಿದ ರಕ್ಷಣೆ..
ನಿನ್ನ ಹೊತ್ತ ಭೂಮಿತಾಯಿ.. ನಿನಗೆ ಭಾಷೆ ಸಂಸ್ಕೃತಿ ಕಲಿಸಿದ ನಾಡು..
ದೇಶ ಕಷ್ಟಕಾಲದಲ್ಲಿ ಜೊತೆಯಾದ ಸ್ನೇಹ ಬಾಂಧವ್ಯಗಳನ್ನು ಎಂದಿಗೂ ಮರೆಯದಿರು..

ಬದುಕಿನಲ್ಲಿ ತಲೆ ಬಾಗುವುದನ್ನು ಕಲಿಯಿರಿ,
ಬದುಕುವುದನ್ನು ಕಲಿಯಿರಿ
ಇತರರು ಬದುಕಲು ಬಿಡಿ..

–ಸಂಗ್ರಹ

# ಮಳೆರಾಯನ ಅಂತರಂಗದ ಅಳಲು

ಯಾಕಪ್ಪ ಮಳೆರಾಯ.ಕೊಬ್ಬು ಜಾಸ್ತಿಯಾಯ್ತು ನಿನಗೆ.....ಇಷ್ಟ ಬಂದಾಗ ಎಲ್ಲೆಂದರಲ್ಲಿ ಮಳೆ ಸುರಿಸಿ ಪ್ರವಾಹ ಸೃಷ್ಟಿಸಿ ನಮ್ಮ ಜನಗಳಿಗೆ ತೊಂದರೆ ಕೊಡುವೆ,

ಬೇಸರವಾದಾಗ ಈ ಕಡೆ ವರ್ಷ ಗಟ್ಟಲೆ ತಲೆ ಹಾಕುವುದಿಲ್ಲ......

ನೀನೇನು ರಾಜಕಾರಣಿಯೇ,

ಕುಡುಕನೇ, ಹುಚ್ಚನೇ........

ಒಂದಷ್ಟು ಜವಾಬ್ದಾರಿ ಬೇಡವೇ ?

ತಲತಲಾಂತರದಿಂದ ಅಣ್ಣ ತಮ್ಮಂದಿರಾದ ನೀನು ಚಳಿ ಬೇಸಿಗೆ ಕಾಲಕಾಲಕ್ಕೆ ತಕ್ಕಂತೆ ಜವಾಬ್ದಾರಿ ನಿರ್ವಹಿಸುತ್ತಿದ್ದವರು ಈಗೇನು ನಿಮಗೆ ದಾಡಿ.

ಅವನು ಚಳಿ ಇದ್ದಕ್ಕಿದ್ದಂತೆ ನಡುಗಿಸಿಬಿಡುತ್ತಾನೆ. ಏನೋ ಕಾಫಿ ಟೀ ಎಣ್ಣೆ ಹೊಡೆದು ಮೈ ಬೆಚ್ಚಗೆ ಮಾಡಿಕೊಂಡು ಮತ್ತು ಬೆಂಕಿ ಕಾಯಿಸಿಕೊಂಡು ಸ್ವಲ್ಪ ಸುಧಾರಿಸಿಕೊಳ್ಳುತ್ತೇವೆ,

ಆ ಬೇಸಿಗೆಯವನು ಈಗೀಗ ಬೆಂಕಿಯುಗುಳಿ ಕೊಲೆ ಮಾಡಲು ಪ್ರಯತ್ನಿಸುತ್ತಿದ್ದಾನೆ. ಕೆಲವರು ಸತ್ತೇ ಹೋಗುತ್ತಾರೆ. ಹೇಗೋ ಹವಾನಿಯಂತ್ರಿತ ವ್ಯವಸ್ಥೆಯಲ್ಲಿ ಅಡಗಿ ಅವನನ್ನು ದೂರ ಇಡುತ್ತೇವೆ.

ಆದರೆ ನಿನ್ನದು ಅತಿಯಾಯಿತು. ನೀನಿರೋದು ನಮ್ಮನ್ನು ಬದುಕಿಸಲಿಕ್ಕೋ ಸಾಯಿಸಲಿಕ್ಕೋ.....

ವರುಣ ದೇವ - ಜೀವಜಲ ಎಂದು ನಿನ್ನನ್ನು ದೇವರಂತೆ ಗೌರವಿಸಿ ಪೂಜೆ ಮಾಡಿದರೆ ಹೀಗಾ ಮಾಡುವುದು.....

ಜನ ಜಾನುವಾರು ಮನೆ ಮಠ ಬೆಳೆ ಎಲ್ಲವನ್ನೂ ಕೊಚ್ಚಿಕೊಂಡು ಹೋಗುತ್ತಿರುವೆಯಲ್ಲ ನಿನಗೆ ಮಾನ ಮರ್ಯಾದೆ ಇದೆಯಾ......

ನಿನಗೆ ಶಕ್ತಿ ಇದೆ ಎಂದ ಮಾತ್ರಕ್ಕೆ ಪಾಪ ಮುಗ್ಧ ಅಸಹಾಯಕ ಜನರನ್ನು ಹೀಗಾ ಭಯಪಡಿಸುವುದು.......

ನಾಚಿಕೆಯಾಗಬೇಕು ನಿನಗೆ ಮಳೆರಾಯ. ಶೇಮ್ ಶೇಮ್ ಶೇಮ್.......

ಆಗ ಮಳೆರಾಯ........

"ಅಯ್ಯಾ ಮನುಜ, ದಯವಿಟ್ಟು ನಿಲ್ಲಿಸು ನಿನ್ನ ಬೈಗುಳ......... ನಾನು ಕೇಳಲಾರೆ.......

ನಿಜ ನನ್ನಿಂದ ನಿನಗೆ ಬಹಳ ತೊಂದರೆಯಾಗುತ್ತಿದೆ. ಅದು ನನಗೂ ಅರ್ಥವಾಗುತ್ತಿದೆ. ಆದರೆ ಏನು ಮಾಡಲಿ ನಾನು ಅಸಹಾಯಕ........

ಅದಕ್ಕೆ ಕಾರಣ ಮಾತ್ರ ನೀನೇ........

ನಾನು ನನ್ನ ಮೂಲ ಗುಣ ಸ್ವಭಾವದಂತೆ ಹುಟ್ಟಿನಿಂದಲೂ ಶತಶತಮಾನಗಳ ಕಾಲ ವರ್ತಿಸುತ್ತಿದ್ದೆ. ಕೆಲವೊಮ್ಮೆ ಹುಷಾರಿಲ್ಲದಿದ್ದಾಗ ಮಾತ್ರ ಒಂದಷ್ಟು ವ್ಯತ್ಯಾಸವಾಗುತ್ತಿತ್ತು.

ದಟ್ಟ ಕಾಡುಗಳು, ಗಿರಿ ಶಿಖರಗಳು, ಬಯಲು ಮರುಭೂಮಿಗಳ, ಹಿಮಾಚ್ಛಾದಿತ ಪ್ರದೇಶಗಳು ಮುಂತಾದ ವೈವಿಧ್ಯಮಯ ಸೃಷ್ಟಿಯಲ್ಲಿ ನಾನು ನನ್ನ ಜವಾಬ್ದಾರಿಯನ್ನು ಸರಿಯಾಗಿಯೇ ನಿರ್ವಹಿಸುತ್ತಿದ್ದೆ. ಬೆಟ್ಟಗಳ ಮೇಲೆ ನಿತ್ಯ ಹರಿದ್ವರ್ಣದ ಕಾಡುಗಳ ಮೇಲೆ ನಾನು ಚಲಿಸುವಾಗ ಸಂತೋಷದಿಂದ ಮಳೆ ಸುರಿಸುತ್ತಿದ್ದೆ. ಅಲ್ಲಿಂದ ಹರಿದು ಕಣಿವೆಗಳಲ್ಲಿ ಸಾಗಿ ಅಲ್ಲಲ್ಲಿ ಒಟ್ಟಾಗಿ ಸೇರಿ ಸಾಗುವಾಗ ಕೆರೆ ಕುಂಟೆ ಬಾವಿಗಳನ್ನು ಒಳಗೊಳಗೆ ತುಂಬಿಸಿ ಸಾಗರದ ಮಡಿಲು ಸೇರುತ್ತಾ ಆನಂದದಿಂದ ಇದ್ದೆ.

ಅಲ್ಲಿಂದ ಮತ್ತೆ ಆವಿಯಾಗಿ ಮೇಲೆ ಹಾರಿ ಮೋಡವಾಗಿ ಚಲಿಸುತ್ತಾ ನಿತ್ಯ ಕರ್ಮಗಳನ್ನು ಮಾಡುತ್ತಿದ್ದೆ. ನೀನು ಕೂಡ ನಾನು ಹರಿಯುವ ಎರಡೂ ಬದಿಯಲ್ಲಿ ಎತ್ತರದ ಅನುಕೂಲಕರ ಪ್ರದೇಶದಲ್ಲಿ ವಾಸಿಸುತ್ತಾ ಆಹಾರಕ್ಕಾಗಿ ಕೃಷಿ ಮಾಡುತ್ತಾ ಜಾನುವಾರುಗಳೊಂದಿಗೆ ಆರಾಮವಾಗಿ ಇದ್ದೆ. ನಾನು ಕೆಲವೊಮ್ಮೆ ಬರುವುದು ತಡವಾದರೂ ಅಥವಾ ಒತ್ತಡಕ್ಕೆ ಒಳಗಾಗಿ ಹೆಚ್ಚು ಸುರಿಸಿದರೂ ನಿನಗೆ ಅಂತಹ ದೊಡ್ಡ ತೊಂದರೆಯೇನು ಆಗುತ್ತಿರಲಿಲ್ಲ.......

ಯಾಕೋ ಬರಬರುತ್ತಾ ನಿನಗೆ ದುರಾಸೆ ಹೆಚ್ಚಾಯಿತೋ ಅಥವಾ ನಿನ್ನ ಸಂಖ್ಯೆ ಜಾಸ್ತಿಯಾಗಿ ನಿನಗೆ ಅನಿವಾರ್ಯವಾಯಿತೋ ಗೊತ್ತಿಲ್ಲ. ಆದರೆ ನೀನು ನನ್ನ ಮೇಲೆ ದೌರ್ಜನ್ಯ ಮಾಡಲು ಪ್ರಾರಂಭಿಸಿದೆ. ನಿನ್ನ ಅನುಕೂಲಕ್ಕಾಗಿ ನನ್ನ ಸಹಜ ಸ್ವಾಭಾವಿಕ ಹರಿವಿಗೆ ಅಡ್ಡಗಾಲು ಹಾಕಿ ಜಲಾಶಯ ನಿರ್ಮಿಸಿ ನನಗೆ ತೊಂದರೆ ಕೊಟ್ಟೆ. ಮಾನಸಿಕ ಹಿಂಸೆ ನೀಡಿದೆ.

ಅದಕ್ಕಿಂತ ಹಿಂಸೆಯಾದದ್ದು ಎಂದರೆ ನನ್ನ ನರನಾಡಿಯಂತಿದ್ದ ನಾನು ಹನಿಯುದುರಿಸಲು ನನ್ನಲ್ಲಿ ಉತ್ಸಾಹ ತುಂಬಿಸುತ್ತಿದ್ದ ಬೆಟ್ಟ ಗುಡ್ಡ ಕಾಡುಗಳನ್ನು ನೀನು

ಕ್ರಮೇಣ ನಾಶಮಾಡುತ್ತಾ ಬಂದೆ, ನನ್ನ ಹೃದಯ ಭಾಗಕ್ಕೇ ಚಾಕುವಿನಿಂದ ಹಿರಿದಂತಾಯಿತು.

ಕಾರ್ಖಾನೆಗಳ – ವಾಹನಗಳ – ಕಟ್ಟಡಗಳ ದೂಳು ಹೊಗೆ ಎಲ್ಲವೂ ಸೇರಿ ಇಡೀ ನಮ್ಮ ಸಂಸಾರದ ವಾತಾವರಣವನ್ನೇ ಹದಗೆಡಿಸಿಬಿಟ್ಟೆ. ಇದು ನಮ್ಮ ಕುಟುಂಬದ ಅಸಹನೆಗೆ ಕಾರಣವಾಯಿತು. ಇದರಿಂದ ಆಗಾಗ ಘರ್ಷಣೆ, ವಿಕೋಪಗಳು ಪ್ರಾರಂಭವಾಯಿತು.

ನಾನು ಹರಿಯುವ ಜಾಗದ ಸುತ್ತಮುತ್ತಲಿನ ಪ್ರದೇಶದಲ್ಲಿ ನೀನು ವಾಸಿಸುತ್ತಾ ನೆಮ್ಮದಿಯಾಗಿರದೆ ಯಾರ ಮಾತಿಗೂ ಕಿವಿಗೊಟ್ಟು ನನ್ನ ಅನುಮತಿ ಇಲ್ಲದೆ ನನ್ನ ಮನಸ್ಸಿಗೆ ವಿರುದ್ದವಾಗಿ ಎತ್ತ ಕಡೆ ಬೇಕೋ ಅತ್ತ ಕಡೆ ತಿರುಗಿಸತೊಡಗಿದೆ. ಆಗಿನಿಂದ ನನ್ನ ಮಾನಸಿಕ ಸ್ಥಿತಿ ಸರಿಯಿಲ್ಲ. ನನ್ನ ಮನಸ್ಸು ನನ್ನ ನಿಯಂತ್ರಣದಲ್ಲಿ ಇಲ್ಲ.

ನಾನು ಚಲಿಸುವ ದಾರಿಗಳನ್ನೆಲ್ಲಾ ಮುಚ್ಚಿ ರಸ್ತೆ, ಸೇತುವೆ, ಮೈದಾನ ಕಟ್ಟಡಗಳನ್ನು ನಿರ್ಮಿಸಿ ನನಗೆ ಅವಮಾನ ಮಾಡಿರುವೆ.

ಒಮ್ಮೊಮ್ಮೆ ಈ ಕಡೆ ತಲೆ ಹಾಕಲೇ ಬಾರದು ಎನಿಸುತ್ತದೆ. ಆದರೂ ನಿನ್ನ ಗೋಳು ನೋಡದೆ ಬರುತ್ತೇನೆ. ಇಲ್ಲಿ ಬಂದಾಗ ಬರಿದಾದ ಬೆಟ್ಟ ಗುಡ್ಡ ಕಾಡು ನೋಡಿ ನನ್ನ ಹುಚ್ಚು ಕೆರಳಿ ಮನಸ್ಸು ಉದ್ವೇಗದಿಂದ ಎಲ್ಲೆಂದರಲ್ಲಿ ಮಳೆ ಸುರಿಸಿ ಬಿಡುತ್ತೇನೆ. ಈ ಖಾಯಿಲೆ ಏನೇ ಮಾಡಿದರೂ ವಾಸಿಯಾಗುತ್ತಿಲ್ಲ.

ಕಾರಣ ಅದಕ್ಕೆ ಔಷಧಿ ನೀಡಬೇಕಾದ ನೀನು ನನ್ನನ್ನು ನಿರ್ಲಕ್ಷಿಸಿ ಮತ್ತಷ್ಟು ಘಾಸಿ ಮಾಡುತ್ತಿರುವೆ. ಈಗ ನಿನಗೆ ತೊಂದರೆಯಾದಾಗ ನನ್ನನ್ನು ಶಪಿಸಿ ಬಾಯಿ ಬಡಿದುಕೊಳ್ಳುತ್ತಿರುವೆ.

ಏ ಮಾನವ ದಯವಿಟ್ಟು ಇನ್ನಾದರೂ ತಾಳ್ಮೆಯಿಂದ ಯೋಚಿಸಿ ನನಗೆ ತೊಂದರೆ ಕೊಡುವುದನ್ನು ನಿಲ್ಲಿಸು. ನನ್ನ ಆರೋಗ್ಯ ಸುಧಾರಿಸಲು ಅವಕಾಶ ಮಾಡಿಕೊಡು. ಆಗ ನನ್ನಿಂದ ನಿನಗೆ ಹೆಚ್ಚಿನ ತೊಂದರೆ ಇರುವುದಿಲ್ಲ. ಇಲ್ಲದಿದ್ದರೆ ನನ್ನ ಮಾನಸಿಕ ರೋಗ ಉಲ್ಬಣವಾಗಿ ಸಂಪೂರ್ಣ ಹುಚ್ಚು ಹಿಡಿಯಬಹುದು. ಆಗ ಆಗುವ ಅನಾಹುತಕ್ಕೆ ನಾನು ಜವಾಬ್ದಾರನಲ್ಲ.

ದಯವಿಟ್ಟು ನನ್ನನ್ನು ಕ್ಷಮಿಸು......."

ಇದನ್ನು ಕೇಳಿ ಮನುಷ್ಯ ಎಲ್ಲಾ ಮುಚ್ಚಿಕೊಂಡು, ಬಾಯಿ ತೆರದು ಲಭಲಭಲಭ ಅಂತ ಕಿರುಚಿಕೊಂಡು ಓಡತೊಡಗಿದ. ಸರ್ಕಾರ ಸ್ಥಾಪಿಸಲು ಹರ ಸಾಹಸ ಮಾಡುವ ರಾಜಕಾರಣಿಗಳು, ತನ್ನ ದುರಾಸೆಗೆ ಪ್ರಕೃತಿಯ ಮೇಲೆಯೇ ದಾಳಿ ಮಾಡುವ ಜನಗಳು.

**– ವಿವೇಕಾನಂದ. ಹೆಚ್.ಕೆ.**

# ನಮ್ಮ ನಮ್ಮ ಅಹಂಕಾರಕ್ಕೆ ಶಾಸ್ತಿ ಉಂಟು! ನೆನಪಿರಲಿ...

ಒಬ್ಬ ಶ್ರೀಮಂತನ ಆಸ್ತಿಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಒಬ್ಬ ಗುಮಾಸ್ತನನ್ನು ನೇಮಿಸಿದರು. ಗುಮಾಸ್ತನನ್ನು ಇದು ಯಾರ ಜಮೀನೆಂದು ಕೇಳಿದರೆ, "ಇದೆಲ್ಲಾ ನನ್ನ ಆಸ್ತಿ ಸ್ವಾಮಿ, ಈ ಮನೆ ಇದೆಲ್ಲಾ ನನ್ನದು" ಎಂದು ಜಂಭ ಕೊಚ್ಚಿಕೊಳ್ಳುತ್ತಿದ್ದನು.

ಒಂದು ದಿನ ಇವನ ಯಜಮಾನನ ತೋಟದ ಮನೆಯಲ್ಲಿ ಯಜಮಾನನ ಅಪ್ಪಣೆಯಿಲ್ಲದೆ ಮೀನನ್ನು ಕದ್ದನು. ಗ್ರಹಚಾರವಶಾತ್ ಯಜಮಾನನು ಆ ಸಮಯಕ್ಕೆ ಸರಿಯಾಗಿ ಬಂದು ಆ ಅಯೋಗ್ಯ ಪಾರುಪತ್ಯಗಾರನು ಮಾಡುತ್ತಿರುವುದನ್ನು ನೋಡಿದನು.

ಗುಮಾಸ್ತನ ವಂಚಕತನವನ್ನು ನೋಡಿ ಅವನನ್ನು ಅವಮಾನ ಮಾಡಿ ಹಿಂದೆ ಸಂಪಾದನೆ ಮಾಡಿದ್ದನ್ನೆಲ್ಲಾ ಕಿತ್ತುಕೊಂಡು, ತನ್ನ ಮನೆಯಿಂದ ಆಚೆಗೆ ಕಳುಹಿಸಿಬಿಟ್ಟನು. ಪಾಪ ಆ ಮನುಷ್ಯನು ತನ್ನ ಏಕಮಾತ್ರ ಆಸ್ತಿಯಾದ ಪಾತ್ರೆ ಇಡುವ ಒಂದು ಹಳೆಯ ಪೆಟ್ಟಿಗೆಯನ್ನು ಕೂಡ, ಆಗ ತನ್ನ ಜತೆಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಆಗಲಿಲ್ಲ.

ಅಹಂಕಾರಕ್ಕೆ ಸಲ್ಲುವ ಶಿಕ್ಷೆ ಇದು.

ಇಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ಭಗವಂತನನ್ನು ಶ್ರೀಮಂತನಿಗೂ ಮತ್ತು ನಾವು ನೀವಾಗಿರುವ ಭೂಮಿಯ ಮೇಲಣ ಜೀವಿಗಳನ್ನು ಗುಮಾಸ್ತನಿಗೂ ಹೋಲಿಸಿದ್ದಾರೆ. ಭೂಲೋಕದಲ್ಲಿ ನಾವು ಭಗವಂತನ ಪರವಾಗಿ ಕಾರ್ಯನಿರ್ವಹಿಸುವವರು, ಇಲ್ಲಿ ಇರುವ ಯಾವುದೇ ವಸ್ತುವೂ ಕೂಡ ನಮ್ಮವಲ್ಲ, ಸಾಯುವಾಗ ನಾವು ಏನನ್ನೂ ಜತೆಯಲ್ಲಿ ಕೊಂಡು ಹೋಗಲಾದು; ನಮ್ಮ ಶರೀರವನ್ನೂ ಸಹ ಇಲ್ಲೇ ಬಿಟ್ಟು ಹೊರಡ ಬೇಕಿಹುದು!

**(ಶ್ರೀ ರಾಮಕೃಷ್ಣ ಉಪದೇಶಾಮೃತ–ಎನ್ನುವ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.)**

# ದ್ವಿತೀಯ ಪಿಯುಸಿ ಉತ್ತೀರ್ಣ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಹಾಗು ಬೀಳ್ಕೊಡುಗೆ ಸಮಾರಂಭ

ದಿನಾಂಕ 17/08/2021 ರಂದು ಅಭಿನವ ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಶಂಕರ ನಗರ, ಮಂಡ್ಯ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಉತ್ತೀರ್ಣರಾದ ವಿದ್ಯಾರ್ತಿಗಳಿಗೆ ಮುಂದಿನ ಶಿಕ್ಷಣಕ್ಕೆ ಮಾರ್ಗದರ್ಶನ ಮತ್ತು ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಉಪನ್ಯಾಸಕರಾದ ಪ್ರೊ॥ ಕೆ.ಪಿ. ದೊರೆಸ್ವಾಮಿರವರು ವಹಿಸಿದ್ದರು. ಜೊತೆಗೆ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಲೊಕಪ್ರಕಾಶ್ ನಾರಾಯಣರವರು ಹಾಗೂ ಬೋಧಕ ವರ್ಗದವರೆಲ್ಲರೂ ಈ ಸಮಾರಂಭದಲ್ಲಿ ಹಾಜರಿದ್ದರು.

ಕಾರ್ಯಕ್ರಮದ ಪ್ರಮುಖ ಕೇಂದ್ರ ಬಿಂದುಗಳಾದ ಉತ್ತೀರ್ಣರಾಗಿರುವ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಭಾಗಿಯಾದ ವಿದ್ಯಾರ್ಥಿಗಳಲ್ಲಿ ಅನುಷ, ಚಂದ್ರಮೌಳಿ ಎಂಬ ವಿದ್ಯಾರ್ಥಿಗಳು ತಮ್ಮ ಸ್ನೇಹಿತರೊಂದಿಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಸುಸಜ್ಜಿತ ಕಾಲೇಜಿನ ವಾತಾವರಣ ಒಳಗೊಂಡಂತೆ, ಗ್ರಂಥಾಲಯ, ಪ್ರಯೋಗಾಲಯ, ಊಟದ ವ್ಯವಸ್ಥೆ, ಕಾಲೇಜಿನ ಬಸ್ಸಿನ ವ್ಯವಸ್ಥೆ ಇವೆಲ್ಲವೂಗಳೂ ಉತ್ತಮವಾಗಿವೆ ಎಂದು ಜೊತೆಗೆ ಉತ್ತಮ ಉಪನ್ಯಾಸಕರು ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಕೋವಿಡ್ – 19 ಲಾಕ್ ಡೌನ್ ಸಂದರ್ಭದಲ್ಲಿ ಮಕ್ಕಳಿಗೋಸ್ಕರ ಆನ್ ಲೈನ್ ತರಗತಿ ಹಾಗೂ ಆಫ್ ಲೈನ್ ತರಗತಿಗಳು, ಸಿ.ಇ.ಟಿ. ಹಾಗೂ ನೀಟ್ ತರಗತಿಗಳನ್ನು ನಿರ್ವಹಿಸಿದ್ದಾರೆ ಎಂಬ ಮಾಹಿತಿಯನ್ನು ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹಿರಿಯ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಮಾತಿನ ಪ್ರಾರಂಭದಲ್ಲೇ ಕಾಲೇಜಿನ ಪ್ರಾಂಶುಪಾಲರಾದ ಲೋಕ ಪ್ರಕಾಶ್ ನಾರಾಯಣಸರ್ ರವರು ವಿದ್ಯಾರ್ಥಿಗಳಿಗೆ ಮುಂದಿನ ಜೀವನದ ಶಿಕ್ಷಣ ಅಭ್ಯಾಸದ ಕೋರ್ಸ್ ಹೇಗಿರಬೇಕು, ಯಾವ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕು ಎಂಬ ವಿಚಾರ ಹಾಗೂ ಜೀವನ ಮೌಲ್ಯಗಳನ್ನು ತಿಳಿಸಲು ಮುಂದಾದರು. 'ಹರಿ ಓಂ ಶ್ರೀ ಗುರುಭ್ಯೋ ನಮಃ' ಎಂದು ನಮಸ್ಕರಿಸಿ ಅಭಿನವ ಭಾರತಿ ಕಾಲೇಜಿನ ಸಂಸ್ಥೆ ಸಂಸ್ಥಾಪಕರಾದಂತಹ ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿಯವರನ್ನು ಸ್ಮರಿಸಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಶಿವಮೂರ್ತಿ ಕೀಲಾರ ಅವರನ್ನು ನೆನೆಸಿಕೊಂಡರು.

ಶ್ರೀ ಅನಂತ ಕುಮಾರ ಸ್ವಾಮೀಜಿಯವರು ಸಂಸ್ಥೆಗಾಗಿ ಶ್ರಮಿಸಿದ ಜೀವನದ ಬಗ್ಗೆ ಮಕ್ಕಳಿಗೆ ತಿಳಿಸಿದರು. ಜೊತೆಗೆ ವಾರಣಾಸಿಯಿಂದ ಬಂದು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯಲ್ಲಿ ನೆಲೆಸಿ ಇಂತಹ ದೈತ್ಯ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿದ್ದಾರೆ ಎಂದು ಸ್ವಾಮಿಜಿಯ ಸಾಧನೆ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು.ವಿದ್ಯಾರ್ಥಿ ಜೀವನದ ನೆನಪುಗಳನ್ನು ಮಕ್ಕಳಿಗೆ ನೆನಪು ತರುತ್ತಾ, ನೀವು ನಡೆದ ಹೆಜ್ಜೆ ಗುರುತೆ ಇತಿಹಾಸವಾಗಬೇಕೆಂದು ಹೇಳಿದರು. ಬದುಕನ್ನು ನಿರ್ಮಿಸುವ ಕೆಲಸವನ್ನು ಶಾಲೆ – ಕಾಲೇಜುಗಳು ಮಾಡುತ್ತವೆ. ಅದೇ ನಿಟ್ಟಿನಲ್ಲಿ ಅಭಿನವ ಭಾರತಿ ಪದವಿ ಪೂರ್ವ ಕಾಲೇಜು, ವಿದ್ಯಾರ್ಥಿಗಳಾದ ನಿಮ್ಮ ಜೀವನದಲ್ಲಿ ಬದಲಾವಣೆಗೆ ಪ್ರೇರಣದಾಯಕವಾಗಿ ನಿಮ್ಮ ಬಾಳಿನಲ್ಲಿ ನಿಂತಿದೆ ಎಂಬ ವಿಚಾರವನ್ನು ಎಲ್ಲಾ ವಿದ್ಯಾರ್ಥಿಗಳಿಗೆ ತಿಳಿಸಿದರು.

**" ಬದುಕು ಒಂದು ಕ್ಷಣ**
**ಬದಲಾವಣೆ ಒಂದು ಕ್ಷಣ**
**ಅಂತ್ಯವೂ ಒಂದು ಕ್ಷಣ**
**ಹುಟ್ಟೂ ಒಂದು ಕ್ಷಣ**
**ಜೀವನ ಬದಲಾವಣೆ ಒಂದು ಕ್ಷಣ"**

ಹಾಗಾಗಿ ಜಿವನ ಬದಲಾವಣೆ ಪ್ರತೀ ವ್ಯಕ್ತಿಗೂ ಅವಶ್ಯಕ ಎಂದು ನುಡಿದರು. ನಿಮ್ಮ ತಂದೆ ತಾಯಿಗಳ ಜೀವನದ ಕನಸನ್ನು ನನಸಾಗಿಸಬೇಕು ಎಂಬ ವಿಚಾರವನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು. ಒಳ್ಳೆಯ ಪ್ರಯತ್ನವೇ ಸಾಧನೆ ಎಂಬ ಫಲವಾಗಿ ಮುಂದೆ ಜೀವನದಲ್ಲಿ ದೊರಕುವುದು. " ವಿದ್ಯೆ ಸಾಧಕನ ಸ್ವತ್ತೆ ಹೊರತು ಸೋಮಾರಿಗಲ್ಲ". ಎಂಬ ನುಡಿಯನ್ನು ಹೆಳಿ ತಮ್ಮ ಹಿತವಚನ ಹಾಗೂ ಮಾರ್ಗದರ್ಶನವನ್ನು ನೀಡಿ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿದರು.

ಕಾಲೇಜು ಹಂತದಲ್ಲಿ ಸಿಇಟಿ ಮಾದರಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಗುರುತಿಸಿ, ಬಹುಮಾನ ನೀಡಿ ಅವರ ಜೀವನದ ಮುಂದಿನ ಓದಿಗೆ ಪ್ರೋತ್ಸಾಹಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದಂತಹ ಪ್ರೊ|| ಕೆ.ಪಿ ದೊರೆಸ್ವಾಮಿ ಸರ್‌ರವರು ಅಧ್ಯಕ್ಷತೆ ನುಡಿಯನ್ನು ಹಾಗೂ ಮಕ್ಕಳಿಗೆ ಜೀವನದ ಮಾರ್ಗದರ್ಶನದ ಕಿವಿ ಮಾತುಗಳನ್ನು ಹೇಳಿದರು. "ತಾಯಿ ಇರುವವರೆಗೂ ಹಸಿವು ತಿಳಿಯದು, ತಂದೆ ಇರುವವರೆಗೂ ಜವಬ್ದಾರಿ ತಿಳಿಯುದು" ಹಾಗಾಗಿಜವಬ್ದಾರಿಯುತವಾದ ಜೀವನ ನಡೆಸಬೇಕೆಂದು ಮಕ್ಕಳಿಗೆ ಹಿತನುಡಿಯನ್ನು ನುಡಿದರು. ಜೀವನದಲ್ಲಿ ಸೋಲು ಕೊನೆಯಲ್ಲ, ಯಶಸ್ಸಿನ ಹಾದಿಯ ಕಡೆ ಪ್ರತಿಯೊಬ್ಬರೂ ಚಿಂತಿಸಬೇಕು ಎಂಬ ವಿಚಾರ ತಿಳಿಸಿದರು.

ಒಟ್ಟಾರೆ ಈ ಒಂದು ಸುಂದರ ಸಮಾರಂಭ ಅತ್ಯಂತ ಯಶಸ್ವಿಯಾಗಿ ಮೂಡಿ ಬಂದಿತು ಎಲ್ಲರಿಗೂ ವಂದನೆಗಳನ್ನು ತಿಳಿಸಿ, ಬೀಳ್ಕೊಡುಗೆ ಸಮಾರಂಭವನ್ನು ಯಶಸ್ವಿ ಯಾಗಿ ಮುಕ್ತಾಯಗೊಳಿಸಿದರು.



**–ಕೆ.ಪಿ ಸಂದೇಶ್**
ಅಭಿನವ ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಂಡ್ಯ.

# ಅಮರರಾದರು ನಮ್ಮ ಸ್ವಾಮೀಜಿ

**ಅಮರರಾದರು ನಮ್ಮ ಸ್ವಾಮೀಜಿ**
**ಅಮಿತ ಪದವಿಯ ಪಡೆದರು**
**ಹೊರನೋಟಕ್ಕೆ ಅವರಿಲ್ಲ ನಮ್ಮ ಹತ್ತಿರ**
**ಒಳನೋಟಕ್ಕೆ ಅವರಿರುವರು ಬಾನೆತ್ತರ"**

ಶ್ರೀ ಶ್ರೀ ಅನಂತಕುಮಾರ ಸ್ವಾಮೀಜಿಯುವರ ಶ್ರೀಕೃಷ್ಣಜನ್ಮಾಷ್ಟಮಿಯ ಪರಂಪರೆಯನ್ನು ನಡೆಸುವ ಸೌಭಾಗ್ಯ ನಮಗೆ ದೊರೆತಿರುವುದು ನಮ್ಮ ಪುಣ್ಯ

ಪ್ರತಿಯೊಬ್ಬರ ಮನೆ ಮಗುವೇ ಆಗಿರುವ ಶ್ರೀಕೃಷ್ಣ ನಜನ್ಮಾಷ್ಟಮಿ ಬದುಕಿನ ಪ್ರತಿಹಂತದಲ್ಲೂ ಮಾರ್ಗದರ್ಶಕ ವಾಗಿ ಉಲ್ಲಾಸದ ಖನಿಯಾಗಿ ಜೀವಂತಿಕೆಯ ಗಣಿಯಾಗಿ ಕೈಹಿಡಿದು ಮುನ್ನಡೆಸುವ ಶಕ್ತಿವಂತ ಶ್ರೀಕೃಷ್ಣನ ಲೀಲಾ ವಿಲಾಸ ಗಳಿಗೆ ಮೈಮನ ತೆರೆಯೋಣ.ಕೃಷ್ಣ ಎಂದರೆ ಪರಮ ತುಂಟ ಮಗು ಸರಸಿ ವಿಲಾಸಿ ತರುಣ ಮಧುರ ಪ್ರೇಮದ ಅಮರನಾಯಕ ಸಮ್ಮೋಹಕ ಕೊಳಲುವಾದಕ ನೃತ್ಯಪಟು ಅಪ್ರತಿಮ ಯೋಧ" ದಿ ಗ್ರೇಟ್ ಕಿಂಗ್ ಮೇಕರ್ "ಮಹಾನ್ ಯೋಗಿ ಎಲ್ಲಕ್ಕಿಂತ ಹೆಚ್ಚಾಗಿ ಜಗತ್ತು ಕಂಡ ಅತ್ಯಂತ ಕಲರ್‌ಫುಲ್ ದೇವರು ಮತ್ತು ಹೀಗೆಲ್ಲಾ ಇದ್ದು ದೇವರಾಗಬಹುದಾ? ಎಂಬ ಅಚ್ಚರಿಗೆ ಕಾರಣವಾದ ಪರಮ ಸಾಮಾನ್ಯ. ಪ್ರತಿಯೊಬ್ಬ ತಾಯಿ ತನಗೆ ಕೃಷ್ಣನಂಥ ಒಂದು ಮಗು ಬೇಕು ಎಂದುಹಾರೈಸುತ್ತಾಳೆ ನನ್ನ ಮಗು ಅವನಂತೆ ತುಂಟತನ ಮಾಡುತ್ತಾನೆ ಎಂದು ಖುಷಿ ಪಡುತ್ತಾಳೆ. ಮಗುವಿನ ಕೈಯಲ್ಲೊಂದು ಕೊಳಲು , ತಲೆಗೊಂದು ನವಿಲುಗರಿ ಇಟ್ಟು ಅವಳೇ ಯಶೋದೆಯಾಗುತ್ತಾಳೆ. ಇಂತಹ ಸಮಾರಂಭವನ್ನು ಶಾಲೆಯಲ್ಲಿ ದಿನಾಂಕ:02.09. 2021 ರಂದು ಅದ್ದೂರಿಯಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಉಪಾಧ್ಯಕ್ಷರು ಗಳನ್ನು ಆಹ್ವಾನಿಸಿ 28 ಮುದ್ದು ರಾಧಾಕೃಷ್ಣ ವೇಷ ಧರಿಸಿದ ಮಕ್ಕಳೊಂದಿಗೆ ಆಚರಿಸಿದೆವು ಹಾಗೂ ಸಮಾರಂಭದಲ್ಲಿ ಉತ್ತಮ ರಾಧಾಕೃಷ್ಣ ವೇಷಧರಿಸಿದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು ಸಿಹಿ ಹಂಚುವುದರ ಮೂಲಕ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಕೃಷ್ಣನದು ಲವಲವಿಕೆಯ ತುಂಬು ಬದುಕು ಬೃಂದಾವನದ ಎಳೆಕೂಸು ಹೇಗಿದ್ದನೋ ಹಾಗೆ ಕೊನೆವರೆಗೂ ಇದು ಸಾಧ್ಯವಾಗಿದ್ದು ಹೃದಯದಲ್ಲಿ ತುಂಬಿದ್ದ ಅಪಾರವಾದ ಪ್ರೀತಿಯಿಂದ ಯಾವತ್ತೂ ಇಂಥ ಉಲ್ಲಾಸಿತವಾಗಿದ್ದ ಮನಸ್ಸಿನಿಂದ ಕಾಪಾಡಿಕೊಂಡ ಸುಂದರ ದೃಢಕಾಯದಿಂದ ಮನಸ್ಸು ಹೃದಯ ಮತ್ತು ದೇಹದ ಆರೋಗ್ಯ ಯಾವತ್ತು ಕೆಡದಂತೆ ಕಾಪಾಡಿ ಕೊಂಡಿದ್ದೆ ಕೃಷ್ಣನ ಜೀವಂತಿಕೆಯ ಮಹಿಮೆ.

**– ಶ್ರೀಮತಿ ಸುಮ, ಶಿಕ್ಷಕರು**
ಎಸ್ ವಿ ವಿ ಎನ್, ಹೊಳಲು

# ಹಿರಿಯ ಗುರುಗಳ ಹಾದಿಯಲ್ಲಿ ಕಿರಿಯ

ಮಾಂಡವ್ಯ ಋಷಿಗಳು ತಪೋಗೈದ ಪುಣ್ಯ ಭೂಮಿಯಾದ, ಕಾವೇರಿ ಒಡಲಿನ ಸಿರಿ ಮಂಡ್ಯ ಇಂಡಿಯಾದಲ್ಲೇ ತನ್ನದೆ ಆದ ಹಲವಾರು ವಿಸ್ಮಯಗಳು, ಸಾಧನೆಗಳ ರಾಶಿಗಟ್ಟಲೆ ಮಡಿಲಲ್ಲಿ ತುಂಬಿಕೊಂಡಿದೆ. ಅಂತಹ ಹತ್ತು ಹಲವಾರು ವಿಚಾರಗಳನ್ನು ಕೆದಕುತ್ತಾ, ಹುಡುಕುತ್ತಾ ಹೋದರೆ ಕಾರಣೀಭೂತರಾದವರು ಪುಣ್ಯ ಪುರುಷರು ನಮ್ಮ ಕಣ್ಮುಂದೆ ಹಾದು ಹೋಗುತ್ತಾರೆ. ಅಂತಹ ಪುಣ್ಯ ಪುರುಷರು, ವಿದ್ಯಾ ದಾನಿಗಳು ಸಾವಿರ ಸಾವಿರ ವಿದ್ಯಾರ್ಥಿಗಳಿಗೆ ನೂತನ ಜ್ಯೋತಿ ಹಚ್ಚಿ ಬದುಕನ್ನು ಹಚ್ಚ ಹಸಿರಾಗಿಸಿದವರೇ ಶ್ರೀ ಶ್ರೀ ಅನಂತಕುಮಾರ ಸ್ವಾಮೀಜಿಯವರು. ಮಂಡ್ಯ ಎಲ್ಲಿ? ವಾರಣಾಸಿ ಎಲ್ಲಿ? ಎಲ್ಲಿಯ ಗಗನ? ಎಲ್ಲಿಯ ಭೂಮಿ? ಎನ್ನುವ ಹಾಗೆ ಸುತ್ತಲೂ ಕಂಗೊಳಿಸುವ ಈ ಹನಿ ವನರಾಶಿ ದೇವತೆಯೇ ಕೈ ಬೀಸಿ ಕರೆದಳೋ, ಮಾಂಡವ್ಯ ಋಷಿಗಳೇ ಅವರ ಮನದಲ್ಲಿ ನಿಂತು ಎಳೆದು ತಂದರೋ, ಇಲ್ಲಾ ಕಾವೇರಿ ಮಾತೆಯೇ ಕೂಗಿ ಕರೆದಳೋ ಇಂತಹ ಪವಿತ್ರ ಭೂಮಿಗೆ ಬಂದು ಕೆಲವು ದಶಕಗಳ ಹಿಂದೆಯೇ ಅಭಿನವ ಭಾರತಿ ಎಂಬ ವಿದ್ಯಾ ಸಂಸ್ಥೆಯನ್ನು ಕಟ್ಟಿ ಹೆಮ್ಮರವಾಗಿ ಬೆಳೆಸುತ್ತಾರೆಂದರೆ ಸಾಧಾರನ ಮಾತುಗಳಲ್ಲ. ಆವತ್ತಿನ ಕಾಲಕ್ಕೆ ವಿದ್ಯಾ ಸಂಸ್ಥೆಯನ್ನು ಹುಟ್ಟುಹಾಕಿ ಬೆಳೆಸುವ ಮಾತಿರಲಿ ನಿತ್ಯ ಬದುಕಿನ ಸಮಸ್ಯೆಗಳ ಜೊತೆಗೆ ಹೋರಾಡಲು ಕಷ್ಟವಿದ್ದ ಕಾಲ. ಐದೈದು ನಯಾ ಪೈಸೆಗೂ ಚಿನ್ನದ ಬೆಲೆ ಇದ್ದ ಕ್ಷಣಗಳವು. ಅಂತಹ ಕಾಲದಲ್ಲಿ ವಿದ್ಯಾ ಸಂಸ್ಥೆ ಹುಟ್ಟುಹಾಕಿ, ಕಟ್ಟಿ ಬೆಳೆಸಿ ಸಾವಿರಾರು ವಿದ್ಯಾರ್ಥಿಗಳಿಗೆ ಯಾರಿಂದಲೂ ಕದಿಯಲಾಗದ, ಬೆಲೆ ಕಟ್ಟಲಾಗದ ವಿದ್ಯೆಯನ್ನು ದಾನ ಮಾಡಿದ ಪರಿ. ಅವರ ಪರಿಶ್ರಮ ಮಂಡ್ಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತದ್ದು, ಗುರು ಎಂದರೆ ಓದಲು ಬರೆಯಲು ಕಲಿಸುವವರೆಂಬುದು ಕೆಲವರ ಪಾಲಿಗೆ ಆದರೆ ಆ ಪದಕ್ಕೆ ಅದರದೇ ಆದ ಅರ್ಥ, ಪಾವಿತ್ರತೆ, ತಾತ್ಪರ್ಯ ಅಡಗಿದೆ "ಗು" ಎಂದರೆ ಕತ್ತಲು "ರು" ಎಂದರೆ ಬೆಳಕು ಒಟ್ಟಿಗೆ ಹೇಳುವುದಾದರೆ ಅಜ್ಞಾನವೆಂಬ ಅಂಧಕಾರದಿಂದ ಜ್ಞಾನವೆಂಬ ಬೆಳಕಿನೆಡೆಗೆ ಕರೆದೊಯ್ಯುವವರೇ ಗುರು ಅಂತಹ ಪರಮ ಪಾವಿತ್ರ್ಯ ಜಾಗವನ್ನು ಅರ್ಥಪೂರ್ಣಗೊಳಿಸಸುವುದು ಅಪರೂಪದಲ್ಲಿನ ಅಪರೂಪದ ವಜ್ರ, ಗುರುದೇವರು ನಮ್ಮ ಅನಂತಕುಮಾರ ಸ್ವಾಮಿಗಳು, ಎಷ್ಟೋ ಬಡ ವಿದ್ಯಾರ್ಥಿಗಳು ಬಡತನಕ್ಕೆ ಅಂಜಿ ಉತ್ತಮ ಶಿಕ್ಷಣ ಪಡೆಯಲು ಕಷ್ಟ ಪಡುತ್ತಿದ್ದ ಕಾಲದಲ್ಲಿ ಇದೇ ಅಭಿನವ ಭಾರತಿ ಶಾಲೆಗೆ ಸೇರಿ ಅಲ್ಲಿನ ವಸತಿ ಸೌಕರ್ಯಗಳನ್ನು ಒದಗಿಸಿದ ಪುಣ್ಯಾತ್ಮರಿವರು. ತದನಂತರ ಈ ಸಂಸ್ಥೆ ಬೆಳೆದು ನಿಂತ ಪರಿ ಹೇಗಿತ್ತೆಂದರೆ ವರ್ಣಿಸಲಸಾಧ್ಯ. ನಮ್ಮಲ್ಲಿ ಇನ್ನೂ ಒಂದು ಮಾತಿದೆ. ಗುರುವನ್ನು ಮೀರಿಸಿ ನಡೆದಾಗಲೇ ಶಿಷ್ಯನಿಗೆ ಬೆಲೆ. ಅದೇ ರೀತಿ ಅನಂತಕುಮಾರ ಸ್ವಾಮಿಗಳು ಕಾಲಾಧಿನರಾದ ಮೇಲೆ ಇಂತಹ ಪರಮ ಪುಣ್ಯ ಜಾಗ, ಆ ಜವಬ್ದಾರಿ ಹೊತ್ತು ಹೆಗಲ ಮೇಲೆ ಹೊತ್ತವರೇ ಅನಂತ ಕುಮಾರ ಸ್ವಾಮಿಗಳ ಶಿಷ್ಯರಾದ ಶಿವಮು?ರ್ತಿ ಕೀಲಾರರವರು  ಅವರು ನಡೆದು ಬಂದ ದಾರಿಯಲ್ಲೇ ನಡೆದು ಬರುತ್ತಿದ್ದು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ವಿದೇಶದ ಮಟ್ಟದಲ್ಲಿ ಈ ಸಂಸ್ಥೆಯ ಕೀರ್ತಿಪತಾಕೆ ಹಾರಿಸಿದ ಯಶಸ್ಸು ಶಿವಮೂರ್ತಿ ಕೀಲಾರರವರಿಗೆ ಸೇರಬೇಕು. ಅನಂತ ಕುಮಾರ ಸ್ವಾಮೀಜಿರವರ ಆಶೀರ್ವಾದ, ಶಿವಮೂರ್ತಿಯೆಂಬ ಹೊಸ ಕನಸುಗಳ ಸಾಧಕರ ಪರಿಶ್ರಮದಿಂದ ಹಿಮಾಲಯ ಪರ್ವತದಂತೆ ಇಂದು ಈ ಸಂಸ್ಥೆ ತಲೆಎತ್ತಿ ನಿಂತಿದೆ ಎಂದರೆ ಅತಿಶಯೋಕ್ತಿಯಾಗಲಾರದು.  ಈ ಒಂದು ಸಂಸ್ಥೆಯಲ್ಲಿ ವಿದ್ಯಾದಾನದ ಜೊತೆಗೆ ಪ್ರತಿನಿತ್ಯ ಯೋಗ, ಧ್ಯಾನ,ಆಧ್ಯಾತ್ಮಿಕ ಕಡೆಗಿನ ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತನ್ನು ನೀಡಿ ಅದರಲ್ಲೂ ವಿಶೇಷವಾಗಿ ಶ್ರೀ ಕೃಷ್ಣ ಜನ್ಮಾಷ್ಟಮಿ, ಗುರು ಪೂರ್ಣಿಮೆಗಳಂತಹ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಿತ್ತಿದ್ದು ಹೊಸ ಭಕ್ತಿಲೋಕ ತೆರೆದುಕೊಳ್ಳುತ್ತದೆ.ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವುದರ ಜೊತೆಗೆ, ಬಡವರ ಪಾಲಿಗೆ ವರದಾನವಂತೆ ಕಡಿಮೆ ದರದಲ್ಲಿ ಉನ್ನತ ಮಟ್ಟದ ಶಿಕ್ಷಣ ನಿಡುತ್ತಿರುವುದು ಅಭಿನವ ಭಾರತಿ ವಿಶೇಷತೆ ಕೂಡಾ.ಕರೋನಾದಂತಹ ಭೀಕರ ಕಾಲದಲ್ಲಿ ಶಿವಮೂರ್ತಿ ಕೀಲಾರರವರು ಸಂಸ್ಥೆಯ ಶಿಕ್ಷಕರಿಗೆ ಸಹಕರಿಸುತ್ತಾ ಸಂಸ್ಥೆಗೆ ಬೆನ್ನೆಲುಬಾಗಿ ಕಾರ್ಯನಿರ್ವಹಿಸಿದ ಪರಿ ಶಿಕ್ಷಕರ ಮನಕ್ಕೆ ನಿಜಕ್ಕೂ ಅಮೃತ ಸಿಂಚನವೇ ಸರಿ. ಯಾಕೆಂದರೆ ಕರೋನಾಭೀಕರತೆಗೆ

ಎಷ್ಟೋ ಸಂಸ್ಥೆಗಳು ಮುಚ್ಚಿ ಹೋಗಿ ಶಿಕ್ಷಕರ ಜೀವನ ಅತಂತ್ರ ಪರಿಸ್ಥಿತಿ ಇದ್ದಂತಹ ಈ ಕಠಿಣ ಸ್ಥಿತಿಯಲ್ಲಿ ಶಿವಮೂರ್ತಿ ಕೀಲಾರರವರು ಮಾನಸಿಕ, ನೈತಿಕ ಬೆಂಬಲ ನೀಡಿ ಆರ್ಥಿಕವಾಗಿ ಬೆಂಬಲ ನೀಡಿ ಮುನ್ನಡೆಸಿರುವುದಕ್ಕೆ ಶಿಕ್ಷಕ ಬಳಗ ಸದಾ ಎಂದೂ ಋಣಿಯಾಗಿರುತ್ತದೆ. ಸಾಧನೆ ಮಾಡೋದು ಸಾಧಕರಾಗೋದು ಎಲ್ಲರಿಂದಲೂ ಸಾಧ್ಯವಿಲ್ಲ. ಆದರೆ ಈ ಒಂದು ಸಂಸ್ಥೆಯನ್ನು ಪ್ರಬಲ ಆತ್ಮ ವಿಶ್ವಾಸ, ಹತ್ತು ಹಲವು ಹೊಸ ಕನಸುಗಳ ಸಾಕಾರ ಮಾಡಿ ಇನ್ನೂ ದೊಡ್ಡ ಮಟ್ಟದಲ್ಲಿ ಮುನ್ನಡೆಸಲು ಹೊರಟಿರುವ ಶಿವಮೂರ್ತಿ ಕೀಲಾರರವರ ಕನಸುಗಳಿಗೆ ನನಸಾಗಲು ಇಡೀ ಮಂಡ್ಯ ಜಿಲ್ಲೆಯ ಜನ ಪ್ರೀತಿಯ ನೀರನ್ನು ಧಾರೆಯೆರೆದು ಪೋಷಿಸಿ ಬೆಳೆಸುತ್ತಾರೆಂಬ ನಿರೀಕ್ಷೆಯಲ್ಲಿ ಸದಾ ಹೊಸತನ, ಹೊಸ ಅಧ್ಯಾಯ ಸೃಷ್ಟಿಯ ಹಾದಿಯಲ್ಲಿ ಸಾಗಲೊರಟಿರುವ ಈ ಸಂಸ್ಥೆಗೆ ನಿಮ್ಮ ಮಹಾಶೀರ್ವಾದ ಇರಲೆಂದು ಬೇಡುತ್ತೇವೆ.

– ಸಂಯುಕ್ತ, ನಿಷ್ಕಲ, ಶಿಕ್ಷಕರು
ಅಭಿನವ ಭಾರತಿ ಹಿರಿಯ ಪ್ರಾಥಮಿಕ ಶಾಲೆ
(ಆಂಗ್ಲ ಮಾಧ್ಯಮ) ಮಂಡ್ಯ.

# ಸ್ವಾಮೀಜಿಗೊಂದು ಓಲೆ

ಸ್ವಾಮೀಜಿ ನಿಮಗೊಂದು
ಸ್ಮರಣೆಯ ಓಲೆ,
ನಾವಿರುವೆವು ನಿಮ್ಮ
ನೆನಪಲ್ಲೆ,
ನಿಮ್ಮಾತ್ಮ ಇರುವುದಲ್ಲವೆ ಈ ಮಣ್ಣಿನಲ್ಲೆ?
ನಿಮಗಿಷ್ಟವಾಯಿತೆ ಈ ನಿಮ್ಮ
ಶಿಲೆ,
ಲೀನಾವಾಗಿದ್ದೀರಲ್ಲವೇ ಆ
ವಿಷ್ಣುವಿನಲ್ಲೆ
ಆಹಾ, ಎಂಥಾ ಕಲೆ !

ನಿಮ್ಮಾಸೆಗಳಿಗೆ ತಕ್ಕವರು,
ನಿಮ್ಮನ್ನು ಮೀರಿಸುವರು,
ನಿಮ್ಮೆಸರಳಿಸದೆ ಉತ್ತುಂಗಕ್ಕೇರಿಸುವರು,
ನಿರಂತರ ಸೇವೆಯಲಿ ತೊಡಗಿಹರು,
ನಮ್ಮ ಶಿವಮೂರ್ತಿಜೀಯವರು.

ನಿಮ್ಮ ಸ್ಮರಣೆಗೆ ಅಡ್ಡಿಯಾಗಲಿಲ್ಲ ಕೊರೋನ,
ನೇಸರನೂ ಅವಿತು ನೀಡಿದ್ದ ತಂಪನ್ನ,
ಮೋಡ ಬಂದರೂ ಮರೆಯಾಯಿತು ಹಾಕದೆ ಹನಿಯನ್ನ,
ಎಲ್ಲೆಲ್ಲೂ ನಿಮ್ಮ ಬಂಧು –ಬಾಂಧವರದೇ ಸೈನ್ಯ
ಕೇಳಲು ನಿಮ್ಮಪುಣ್ಯ ಸ್ಮರಣೆಯನ್ನ.

ಬಂದವರಿಗೆಲ್ಲಾ ಬಿಸಿ ತಿಂಡಿ ತಿನಿಸಿ,
ಹಸಿವು ಬಾಯಾರಿಕೆಯ ತಣಿಸಿ,
ತನು –ಮನಕೆ ಆಹ್ಲಾದ ತರಿಸಿ ಮನೆ ಕಡೆಯ ಚಿಂತೆ ಮರೆಸಿ
ಕೂರಿಸುವಂತಿತ್ತು ನಿಮ್ಮ ನೆನೆಸಿ.

ಜಗದ್ಗುರು, ಅವಧೂತರು
ಸ್ಮರಿಸಿದರು ನಿಮ್ಮನ್ನ
ಜೊತೆಗೆ ನಮ್ಮನ್ನ,
ಕಬ್ಬು ಗಡುಸಾದರೂ, ರಸದಂತೆ ಸಿಹಿಯಾದವರನ್ನ
ಬೆಣ್ಣೆಯಂತಿರುವರನ್ನ,
ಇಬ್ಬಗೆ ಬಯಸದವರನ್ನ, ಯಾರಿಗೂ ಬಕೆಟ್
ಹಿಡಿಯದವರನ್ನ, ಸಹೃದಯರನ್ನ.
ಮಂಗಳವಾಡಿತು ಮಳೆ ಹಾಕಿ ಮುತ್ತಿನ ಸೋನೆಯನ್ನ.
ಸಾರಾಗವಾಗಿತ್ತು ಸ್ಮರಣೆ
ಇದು ನಮ್ಮ ಪುಣ್ಯ.

ಇಂತಿ ತಮ್ಮ ಮಕ್ಕಳು
ಹರಸಿ –ಹಾರೈಸಿ ದಾದಾಜಿ
ಧನ್ಯವಾದಗಳು.



–ಜೆ. ಉಮಾ,ಶಿಕ್ಷಕರು
ಅಭಿನವ ಭಾರತಿ ಪ್ರೌಢಶಾಲೆ, ಕನ್ನಡ ಮಾಧ್ಯಮ
ಮಂಡ್ಯ.